ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-18 ಸಂಚಿಕೆ-11 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪದಲ್ಲಿ ನವರಾತ್ರಿ ಹಬ್ಬದ ಸಂಭ್ರಮ





ನವರಾತ್ರಿ ನಾಡಹಬ್ಬ. ಈ ನಾಡಹಬ್ಬವನ್ನು ಹೊಸ ಆಡಳಿತ ಮಂಡಳಿಯು ವಿಜೃಂಭಣೆಯಿಂದ ಆಚರಿಸಬೇಕೆಂದೂ ಪ್ರತಿದಿನ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ರಾತ್ರಿ ಪ್ರಸಾದ ಭೋಜನವೂ ನೆರವೇರಬೇಕೆಂದೂ ನಿರ್ಣಯಿಸಿತು. ಅದರಂತೆ ಎಲ್ಲಾ ಕಾರ್ಯಕ್ರಮಗಳು ಸಂಘದ ಯುವ ವೇದಿಕೆ, ಸಾಂಸ್ಕೃತಿಕ ವೇದಿಕೆ, ಮಹಿಳಾ ವೇದಿಕೆ ಮತ್ತು ಊಟೋಪಚಾರ ವೇದಿಕೆ ಹಾಗೂ ಸಮಾಜ ಬಾಂಧವರೆಲ್ಲರ ಸಹಕಾರದಿಂದ ಅತ್ಯುತ್ತಮ ರೀತಿಯಲ್ಲಿ ಸಂಪನ್ನಗೊಂಡವು.

ಪ್ರತಿದಿನ 2–3 ಜನ ಕತೃಗಳಿಂದ, ದುರ್ಗಾನಮಸ್ಕಾರ ಪೂಜೆ ಹಾಗೆಯೇ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಶ್ರೀ ಸತೀಶ್ ಭಟ್ ದುರ್ಗಾನಮಸ್ಕಾರ ಪೂಜೆಯು ಪುರೋಹಿತರಾಗಿ ಸಹಕರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಜನೆ, ಭರತನಾಟ್ಯ, ಕೊಳಲು ವಾದನ, ಹರಿಕಥೆ, ವೀಣಾ ವಾದನ, ಸುಗಮ ಸಂಗೀತ, ಯಕ್ಷಸಂಗೀತಗಳಂತಹ ಶ್ರೀದೇವಿಗೆ ಪ್ರಿಯವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಒಟ್ಟಿನಲ್ಲಿ ಪ್ರತಿದಿನ ಸಂಜೆ 4 ರಿಂದ 10 ಗಂಟೆಯವರೆಗೆ ಶ್ರೀಶಾರದಾ ಮಂಟಪದ ವಠಾರದಲ್ಲಿ ಹಬ್ಬದ ವಾತಾವರಣವಿತ್ತು.

**ವಿಜಯ ದಶಮಿ :–**

ವಿಜಯದಶಮಿಯಂದು ಬೆಳಿಗ್ಗೆ 7 ಗಂಟೆಗೆ ಶ್ರೀ ದೇವಳದಲ್ಲಿ ಪ್ರಾರ್ಥನೆಯೊಂದಿಗೆ ಶ್ರೀ ಚಂಡಿಕಾಯಾಗವು ಪ್ರಾರಂಭಗೊಂಡಿತು. ಶ್ರೀ ಪಾವಂಜೆ ಜಗದೀಶ್ ಉಪಾಧ್ಯಾಯರ ನೇತೃತ್ವದಲ್ಲಿ ಐವರು ಋತ್ವಿಜರು ಸೇರಿ ಕತೃಗಳಾದ ಶ್ರೀ ಟಿ.ಆರ್.ಶ್ಯಾನುಭಾಗರ ಅನುಪಸ್ಥಿತಿಯಲ್ಲಿ ಶ್ರೀ ತಂತ್ರಾಡಿ ವಿಶ್ವನಾಥ್ ಶ್ಯಾನುಭೋಗ್ ದಂಪತಿಗಳ ನೇತೃತ್ವದಲ್ಲಿ ನಡೆದ ಶ್ರೀ ಚಂಡಿಕಾಯಾಗ ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತು.

ಇದರ ಜೊತೆಯಲ್ಲಿ ಪ್ರತೀವರ್ಷದಂತೆ ವಿದ್ಯಾರ್ಥಿಗಳಿಗಾಗಿ ಅನೇಕ ಸ್ಪರ್ಧೆಗಳನ್ನು ನಡೆಸಲಾಯಿತು. ಶ್ರೀ ಟಿ. ಜಗದೀಶ್ ರಾವ್, ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ; ಶ್ರೀ ಗಾಯತ್ರಿ ಏಕ್ಕಾಡಿ, ಶ್ರೀ ಪ್ರಭಾಕರ ಭಂಡಿ, ಶ್ರೀ ಪ್ರವೀಣ್ ಕುಮಾರ್ ಮೊದಲಾದವರು ವಿವಿಧ ಸ್ಪರ್ಧೆಗಳನ್ನು ನಡೆಸಿಕೊಟ್ಟರೆ, ಸಂಗೀತ ತಜ್ಞರಾದ ಶ್ರೀಮತಿ ಹೇಮಲತಾ ಮತ್ತು ಶ್ರೀಮತಿ ದಿವ್ಯಶ್ರೀಯವರು ನಿರ್ಲಿಪ್ತ ತೀರ್ಪುಗಾರರಾಗಿದ್ದರು. ನಮ್ಮ ಸಮಾಜದಿಂದ ಶ್ರೀಮತಿ ಮೀರಾ ರಾಜೇಶ್, ಶ್ರೀಮತಿ ಅಪರ್ಣಾ ಗಣೇಶ್, ಶ್ರೀ ಪರಮೇಶ್ವರ ಹೆಬ್ಬಾರ್, ಶ್ರೀಮತಿ ವಿನುತಾ ರಾವ್ ಮೊದಲಾದವರು ತೀರ್ಪುಗಾರರಾಗಿ ಸಹಕರಿಸಿದರು. ಮಧ್ಯಾಹ್ನದೊಳಗೆ ಭಕ್ತಿ ಸಂಗೀತ, ಸ್ತೋತ್ರ ಕಂಠಪಾಠ, ಚಿತ್ರರಚನೆ, ರಂಗೋಲಿ ಮೊದಲಾದ ಸ್ಪರ್ಧೆಗಳು ಮುಗಿದು ಮಧ್ಯಾಹ್ನದ ಊಟದ ಸಮಯದಲ್ಲಿ ಚೂರ್ಣಿಕೆ ಹೇಳುವ ಸ್ಪರ್ಧೆಯು ಮುಕ್ತಾಯಗೊಂಡಿತು. ಸುಮಾರು 800ಕ್ಕಿಂತಲೂ ಹೆಚ್ಚು ಜನ ಮಧ್ಯಾಹ್ನದ ಭೋಜನ ಪ್ರಸಾದ ಸ್ವೀಕರಿಸಿದರು. ಶ್ರೀ ಟಿ. ಜಗದೀಶ ರಾವ್ ರಂಗೋಲಿ ಸ್ಪರ್ಧೆಯ ಬಹುಮಾನದ ಪ್ರಾಯೋಜಕರಾಗಿದ್ದರೆ, ಉಳಿದ ಸ್ಪರ್ಧೆಗಳ ಬಹುಮಾನವನ್ನು ದಿ| ಉಷಾರಾವ್ ಸ್ಮರಣಾರ್ಥ ಅವರ ಪತಿ ಶ್ರೀ ವೈ. ಮೋಹನರಾಯರು ಪ್ರಾಯೋಜಿಸಿದ್ದರು.

ಭೋಜನದ ನಂತರ ಮಹಿಳಾ ವೇದಿಕೆಯು ನಿರ್ದೇಶಿಸಿದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಹಾಡುಗಳು, ಕೋಲಾಟ, ಬೆಂಗಾಲಿ, ಗುಜರಾತಿ ಹಾಗೂ ಇತರ ವೈವಿಧ್ಯಮಯ ನೃತ್ಯಗಳು ಪ್ರದರ್ಶಿತಗೊಂಡವು.




**ಸಭಾ ಕಾರ್ಯಕ್ರಮ :–**

ಸಭಾಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಪ್ರಾಸ್ತಾವಿಕವಾಗಿ ಮಾತಾಡಿ ಎಲ್ಲರನ್ನು ಸ್ವಾಗತಿಸಿದರು. ಉಡುಪಿ ಅಜ್ಜರಕಾಡಿನ ಜಿಲ್ಲಾ ಆಸ್ಪತ್ರೆಯ ಆಯುರ್ವೇದ ವಿಭಾಗದ ಸೀನಿಯರ್ ಮೆಡಿಕಲ್ ಆಫೀಸರ್ ಡಾ| ಶ್ಯಾಮ್‌ರಾವ್ ಹಾಗೂ ಒರಿಸ್ಸಾ ಭುವನೇಶ್ವರ ಎಸ್‌ಆರ್ ಸ್ಟೀಲ್ ಇಂಡಸ್ಟ್ರೀಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ.ಟಿ. ಸುಬ್ರಹ್ಮಣ್ಯ ಶ್ಯಾನುಭಾಗ್‌ರವರು ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ವಿದ್ಯಾರ್ಥಿವೇತನ, ಪುರಸ್ಕಾರಗಳನ್ನು ವಿತರಿಸಿ ಸಮಯೋಚಿತವಾಗಿ ಮಾತನಾಡಿ ಸಂಘಕ್ಕೆ ಶುಭ ಹಾರೈಸಿದರು. ಸಂಘದ ಸಲಹಾಗಾರರೂ, ಮಾಜಿ ಅಧ್ಯಕ್ಷರೂ ಆದ ಶ್ರೀ ಪ್ರಫುಲ್ಲಚಂದ್ರ ರಾವ್, ಕೋಶಾಧಿಕಾರಿ ಶ್ರೀ ಜಯರಾಮ್ ರಾವ್ ಮತ್ತು ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಸುರೇಶ್ ರಾವ್ ಕುತ್ಪಾಡಿ ಉದಯಚಂದ್ರ ಪ್ರತಿಭಾ ಪುರಸ್ಕಾರದ ವಿವರ ನೀಡಿದರು. ಡಾ| ಸಂತೋಷ್ ರಾವ್‌ರವರು ಅಂಬಲ್ಪಾಡಿ ಕೃಷ್ಣರಾವ್ ವಿದ್ಯಾರ್ಥಿ ಪುರಸ್ಕಾರದ ವಿವರ ವಾಚಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ವಿದ್ಯಾರ್ಥಿ ವೇತನದ ಸಂಪೂರ್ಣ ಮಾಹಿತಿ ನೀಡಿದರು. ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ ಬಹುಮಾನಿತರ ವಿವರ ಓದಿದರು.

ಶ್ರೀ ಪ್ರವೀಣ್ ಕುಮಾರ್‌ರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭಾ ಕಾರ್ಯಕ್ರಮವು ಜತೆ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿಯವರ ಧನ್ಯವಾದದೊಂದಿಗೆ ಮುಕ್ತಾಯವಾಯಿತು. ಕು| ವೃಂದಾ ಕೆ. ರಾವ್ ಕಾರ್ಯಕ್ರಮ ನಿರೂಪಣೆ ಮಾಡಿದರು.

ಬೆಂಗಳೂರಿನ ಶ್ರೀ ಟಿ.ಆರ್.ಶ್ಯಾನುಭಾಗ್ ದಂಪತಿಗಳು ವಿಜಯದಶಮಿಯ ಚಂಡಿಕಾಹೋಮದ ಪ್ರಯುಕ್ತ ರೂ.25,000 ದೇಣಿಗೆಯನ್ನು ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ನೀಡಿದ್ದಾರೆ. ಅವರಿಗೆ ಸಂಘವು ಆಭಾರಿಯಾಗಿದೆ.

## ಶ್ರೀ ಹೆರ್ಗ ನಿರಂಜನ ರಾವ್ ನಿಧನ



ನಮ್ಮ ಸಂಘದಲ್ಲಿ ಕಾರ್ಯದರ್ಶಿಯಾಗಿ, ಆಡಳಿತ ಮಂಡಳಿಯ ಸದಸ್ಯರಾಗಿ ಹಾಗೂ ವೇದಿಕೆಗಳ ಸಂಚಾಲಕರಾಗಿ ಸೇವೆ ಸಲ್ಲಿಸಿ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಶ್ರೀ ಹೆರ್ಗ ನಿರಂಜನ ರಾಯರು ತಾ 17.10.2018ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನ ಹೊಂದಿದರು. ಇವರು ಹೆರ್ಗದ ದಾಸಪ್ಪಯ್ಯ ಹಾಗೂ ಸೀತಮ್ಮ ದಂಪತಿಗಳ ಪುತ್ರ. ಹೆರ್ಗದಲ್ಲಿ ಜನಿಸಿ ಎಂ.ಎ ತನಕದ ಶಿಕ್ಷಣವನ್ನು ಪೂರೈಸಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತ ತನ್ನ ನಯವಿನಯ, ಪ್ರಾಮಾಣಿಕತೆ ಹಾಗೂ ಕರ್ತವ್ಯನಿಷ್ಟೆಗಳಿಂದ ಜನಪ್ರಿಯರಾಗಿ ಮಣಿಪಾಲ ಜ್ಯೂನಿಯರ್ ಕಾಲೇಜಿನ ಉಪಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರವೂ ಹೆರ್ಗ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಹಾಗೂ ಪರ್ಕಳದ ವಿವಿಧ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿ ಭಾಗವಹಿಸುತ್ತಿದ್ದರು. ಈ ಬಾರಿಯ ನವರಾತ್ರಿಯಂದೂ ಹೆರ್ಗ ದೇವಸ್ಥಾನದ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ನಮ್ಮ ಸಂಘದ ಚಟುವಟಿಕೆಗಳಲ್ಲಿಯೂ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ಕಳೆದ ಆಡಳಿತ ವರ್ಷದ ಅವಧಿಯಲ್ಲಿ ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಯ ಚುಕ್ಕಾಣಿ ಹಿಡಿದು ಶ್ರೀ ಶಾರದಾ ಟ್ರೋಫಿ, ಸುವರ್ಣ ಮಹೋತ್ಸವ ಹಾಗೂ ಇನ್ನಿತರ ಎಲ್ಲಾ ಕಾರ್ಯಕ್ರಮಗಳ ಸಭಾ ಕಾರ್ಯಕ್ರಮವನ್ನು ನಿರ್ದೇಶಿಸಿದ್ದರು. ಮೃದುಮಾತಿನ, ನಿಗರ್ವಿ ಸ್ವಭಾವದ ಶ್ರೀ ನಿರಂಜನರಾಯರು ತಮ್ಮ ಹೃದಯವಂತಿಕೆಯಿಂದಲೇ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. ಸೇವಾ ಪ್ರಶಸ್ತಿಗಳು ತನ್ನನ್ನು ಅರಸಿಕೊಂಡು ಬಂದಿದ್ದರೂ ವಿದ್ಯಾರ್ಥಿಗಳ ಪ್ರೀತಿ ಅಭಿಮಾನಕ್ಕಿಂತ ಮಿಗಿಲಾದ ಪ್ರಶಸ್ತಿಯಿಲ್ಲ ಎಂದು ಭಾವಿಸಿದವರು. ಅವರನ್ನು ಹಲವಾರು ಸಂಘಸಂಸ್ಥೆಗಳು ಸನ್ಮಾನಿಸಿವೆ. ಶ್ರೀಯುತರು ಪತ್ನಿ ಶ್ರೀಮತಿ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಹಾಗೂ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಅಗಲಿದ್ದಾರೆ. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಎಲ್ಲಾ ಪದಾಧಿಕಾರಿಗಳು ಶ್ರೀಯುತರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಶ್ರೀಯುತರ ಕುಟುಂಬಕ್ಕೆ ಅವರ ಅಗಲಿಕೆಯನ್ನು ಭರಿಸಲು ಶಕ್ತಿಯನ್ನು ಶ್ರೀ ಶಾರದಾದೇವಿಯು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಈ ಬಾರಿಯ ನವರಾತ್ರಿಯು ಉಡುಪಿಯ ಸಮಾಜಬಾಂಧವರಿಗೆ ಸದಾಕಾಲ ಮೆಲುಕು ಹಾಕುವ ನೆನೆಪುಗಳನ್ನು ನೀಡುವಂತದ್ದಾಗಿತ್ತು. ಉಡುಪಿಯಲ್ಲಿ ಶೃಂಗೇರಿಯ ಜಗದ್ಗುರುಗಳಿಂದ ಪ್ರತಿಷ್ಠಾಪಿತವಾದ ಶಾರದಾದೇವಿಯ ಏಕೈಕ ದೇವಸ್ಥಾನವಾದ ನಮ್ಮ ಶ್ರೀ ಶಾರದಾ ಪರಮೇಶ್ವರಿ ದೇವಸ್ಥಾನದಲ್ಲಿ ಪ್ರತೀ ವರ್ಷವೂ ನವರಾತ್ರಿಯನ್ನು ಇತರ ಹಬ್ಬಗಳಿಗಿಂತ ವಿಶೇಷವಾಗಿಯೇ ಆಚರಿಸಿಕೊಂಡು ಬರುತ್ತಿದ್ದೇವೆ. ಒಂಬತ್ತೂ ದಿನಗಳಲ್ಲಿಯೂ ದೇವಸ್ಥಾನಕ್ಕೆ ವಿದುದ್ದೀಪಾಲಂಕಾರ, ಪುಷ್ಪಾಲಂಕಾರ, ದೇವಿಗೆ ಬೆಳ್ಳಿಯ ಪೀಠ, ಕಿರೀಟ, ಸ್ವರ್ಣ ವಜ್ರಾಭರಣಗಳಿಂದ ಅಲಂಕಾರ, ಪ್ರತೀ ಸಂಜೆಯೂ ಭಜನೆ, ಪಾರಾಯಣ, ವಿಶೇಷ ಪೂಜೆಗಳು ನಡೆಯುವುದು ಪ್ರತೀ ವರ್ಷದ ವಾಡಿಕೆಯಾಗಿತ್ತು. ಭಕ್ತರಿಂದ ಅಕ್ಷರಾಭ್ಯಾಸ, ಸೀರೆ ಸಮರ್ಪಣೆ, ದುರ್ಗಾನಮಸ್ಕಾರ ಇತ್ಯಾದಿ ಸೇವೆಗಳು ನಡೆಯುತ್ತಿದ್ದವು. ಹೀಗೆ ವಿಜಯದಶಮಿಯು ನಮ್ಮ ಸಂಘದ ಮುಖ್ಯ ಚಟುವಟಿಕೆಯಾಗಿತ್ತು. ಚಂಡಿಕಾಹೋಮ, ವಿವಿಧ ಸ್ಪರ್ಧೆಗಳು, ಬಹುಮಾನ ವಿತರಣೆ, ವಿದ್ಯಾರ್ಥಿವೇತನ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮ, ಯಕ್ಷಗಾನ ಹೀಗೆ ದಿನವಿಡೀ ವೈವಿಧ್ಯಮಯ ಚಟುವಟಿಕೆಗಳ ದಿನವಾಗಿರುತಿತ್ತು. ಹೀಗೆ ವಿಜಯದಶಮಿಯನ್ನು ನಮ್ಮ ಉಡುಪಿಯ ಸಮಾಜ ಬಾಂಧವರಿಗೆ ನಾಡಹಬ್ಬವೆಂದೆನಿಸುವ ರೀತಿಯಲ್ಲಿ ಪ್ರತೀವರ್ಷವೂ ಆಚರಿಸಿಕೊಂಡು ಬಂದಿರುವ ನಮ್ಮ ಆಡಳಿತ ಮಂಡಳಿಗಳಿಗೆ ಮೆಚ್ಚುಗೆ ಸೂಚಿಸಲೇಬೇಕು.

ಈ ಬಾರಿಯ ನವರಾತ್ರಿ ಇನ್ನೂ ವಿಶೇಷವಾಗಿತ್ತು. ನೂತನವಾಗಿ ಆಯ್ಕೆಯಾದ ನಮ್ಮ ಸಂಘದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್‌ರವರು ಸಮಾರಂಭಗಳನ್ನು ನಿಭಾಯಿಸುವುದರಲ್ಲಿ ನಿಷ್ಣಾತರು. ಕಡಿಯಾಳಿಯ ಸಾರ್ವಜನಿಕ ಗಣೇಶೋತ್ಸವ, ಉಡುಪಿಯ ಅಷ್ಟಮಠಗಳ ಸಮಾರಂಭಗಳು, ತಮ್ಮ ಹುಟ್ಟೂರು ಕಬ್ಬಿನಾಲೆಯ ಉತ್ಸವ ಇತ್ಯಾದಿಗಳಲ್ಲಿ ಸಕ್ರಿಯವಾಗಿರುವ ಅವರಿಗೆ ನಮ್ಮ ದೇವಿಯ ದೇವಸ್ಥಾನದಲ್ಲಿ ನವರಾತ್ರಿಯ ರಾತ್ರಿಯ ಪೂಜೆಯ ಸಂದರ್ಭದಲ್ಲಿ ಕನಿಷ್ಟ ಇನ್ನೂರು ಜನರಾದರೂ ಇರಬೇಕು, ಅದಕ್ಕೆ ತಕ್ಕ ವ್ಯವಸ್ಥೆಮಾಡಬೇಕು ಎಂದು ಯೋಜನೆ ಹಾಕಿದರು. ಅಂತೆಯೇ ನವರಾತ್ರಿಯ ಪ್ರತೀ ಸಂಜೆ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಸಂಘದ ವತಿಯಿಂದಲೇ ಏರ್ಪಡಿಸಿ ಪೂಜೆಯ ನಂತರ ಪ್ರಸಾದ ಭೋಜನವನ್ನೂ ಸಂಘದ ವತಿಯಿಂದಲೇ ಆಯೋಜಿಸುವ ಸಲಹೆಯನ್ನು ಮುಂದಿಟ್ಟರು. ಅಂತೆಯೇ ನಿರ್ದೇಶಕರುಗಳ ಸಕಾರಾತ್ಮಕ ಪ್ರತಿಕ್ರಿಯೆ, ಸಮಾಜಬಾಂಧವರ ಸಹಕಾರ, ಸೇವಾರ್ಥಿಗಳ ಭಾಗವಹಿಸುವಿಕೆಯೊಂದಿಗೆ ಮತ್ತು ಅದರೊಂದಿಗೆ ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಯವರು ನಮ್ಮ ಸಮಾಜದ ಪ್ರತಿಭಾನ್ವಿತ ಕಲಾವಿದರನ್ನು ಗುರುತಿಸಿ ಪ್ರತೀ ಸಂಜೆಯೂ ಶಾರದಾ ಮಂಟಪದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿದ್ದಿದು, ದೇವಸ್ಥಾನ ವೇದಿಕೆಯವರು, ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಯವರು, ಯುವ ವೇದಿಕೆಯವರು ಹಾಗೂ ಮಹಿಳಾವೇದಿಕೆಯವರ ಸಮನ್ವಯದೊಂದಿಗೆ ಈ ಯೋಜನೆಯು ಅಭೂತಪೂರ್ವವೆನಿಸುವಂತೆ ಯಶಸ್ವಿಯಾಯಿತು. ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಜೆಯಾಗುತ್ತಿದ್ದಂತೆ ಜನರ ಓಡಾಟ, ಭಜನೆ, ಪಾರಾಯಣ, ಅರ್ಚನೆ, ಸೇವೆ, ಕಾಣಿಕೆ ಎಲ್ಲಕ್ಕೂ ಮಿಗಿಲಾಗಿ ದೇವಿಯ ಸಾಲಂಕೃತ ಭವ್ಯ ಮೂರ್ತಿಯ ಎದುರಿನಲ್ಲೆ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಿದ್ದಿದು ಸೇವಾರ್ಥಿಗಳ ಮನಸ್ಸಿನಲ್ಲಿ ಸಮರ್ಪಣಾ ಭಾವನೆಯನ್ನು ಮೂಡಿಸಿ ನಿಜಾರ್ಥದಲ್ಲಿಯೂ ಕೃತಾರ್ಥರನ್ನಾಗಿಸಿತು. ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಹಾಗೂ ಯುವಕ ಯುವತಿಯನ್ನೂ ಆಕರ್ಷಿಸಿದ್ದು ಈ ಬಾರಿಯ ವಿಶೇಷ. ಮಂಗಳೂರು, ಪುತ್ತೂರು, ಬ್ರಹ್ಮಾವರ, ಮುಂಬಯಿ ಮಹಾರಾಷ್ಟ್ರದಿಂದಲೂ ನಮ್ಮ ಸಮಾಜ ಬಾಂಧವರು ಆಗಮಿಸಿದ್ದರು. ಹೀಗೆ ಈ ಬಾರಿಯ ನವರಾತ್ರಿಯು ಸಂಘಟನೆಯ ದೃಷ್ಟಿಯಿಂದಲೂ, ಆಚರಣೆಯ ದೃಷ್ಟಿಯಿಂದಲೂ ಯಶಸ್ವಿಯಾಯಿತು. ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಶ್ರಿ ಕೆ. ಸುರೇಶ್ ರಾವ್, ಶ್ರೀ ಪ್ರಭಾಕರ ಭಂಡಿ, ಶ್ರೀ ಕೃಷ್ಣಕುಮಾರ್ ಮಟ್ಟು, ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ, ಶ್ರೀ ಬಿ ಜಯರಾಮ ರಾವ್,ಪುರೋಹಿತರಾದ ಶ್ರೀ ಸತೀಶ್ ಭಟ್, ಮಂಟಪದ ವ್ಯವಸ್ಥಾಪಕ ಶ್ರೀ ಅಜಿತ್ ಹೀಗೆ ಅನೇಕ ಮಂದಿ ದೇವಿಯ ಚರಣಗಳಲ್ಲಿ ಇದಕ್ಕಾಗಿ ತಮ್ಮ ಸಮಯ ಹಾಗೂ ಶ್ರಮವನ್ನು ಮನಪೂರ್ವಕವಾಗಿ ವಿನಿಯೋಗಿಸಿ ಕೃತಕೃತ್ಯತೆಯನ್ನು ಪಡೆದಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು. ಮುಂದೆ ಬರುವ ಪ್ರತಿಷ್ಠಾಮಹೋತ್ಸವ ಹಾಗೂ ಕಿರುನವರಾತ್ರಿಗಳನ್ನೂ ಇದೇ ರೀತಿ ಆಚರಿಸುವಂತಾಗಲಿ ಹಾಗೂ ಇದೇ ಹುಮ್ಮಸ್ಸಿನೊಂದಿಗೆ ಕುಂಭಾಭಿಷೇಕ ಮಹೋತ್ಸವವೂ ನೆರವೇರಲಿ ಎಂದು ಹಾರೈಸುತ್ತೇವೆ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)




**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



# ಶಾರದಾ ಮಂಟಪದಲ್ಲಿ ನವರಾತ್ರಿ ಕಾರ್ಯಕ್ರಮಗಳ ವಿವರ

## ನವರಾತ್ರಿಯ ದುರ್ಗಾನಮಸ್ಕಾರ ಸೇವಾರ್ಥಿಗಳ ವಿವರ :

1) ಡಾ। ವೈ ಸುದರ್ಶನ್ ರಾವ್ 2) ಡಾ. ಸಂತೋಷ ರಾವ್ 3) ಶ್ರೀ ಪ್ರಭಾಕರ ಭಂಡಿ 4) ಶ್ರೀ ಎಂ. ಸಂತೋಷ್ ರಾವ್ 5) ಶ್ರೀ ಎಸ್.ಎಂ ರಾವ್ 6) ಶ್ರೀ ವೈ ಮುರಲೀಧರ ರಾವ್ 7) ಶ್ರೀ ಜಿ. ಕೆ ಕೋಲ್ಪೆ 8) ಡಾ। ಬಿ.ಎಸ್.ಸತೀಶ್ ರಾವ್ 9) ಶ್ರೀ ಬಿ.ಜಯರಾಮ ರಾವ್ 10) ಶ್ರೀ ವೈ.ಎಸ್. ಜನಾರ್ಧನ್ ರಾವ್ 11) ಶ್ರೀ ಸುರೇಶ್ ಶಾನುಭಾಗ್ 12) ಶ್ರೀ ಮ.ನಾ ಹೆಬ್ಬಾರ್ 13) ಶ್ರೀ ಪ್ರಫುಲ್ಲಚಂದ್ರ ರಾವ್ 14) ಶ್ರೀ ಮಂಜುನಾಥ ಹೆಬ್ಬಾರ್ 15) ಶ್ರೀ ಗಣೇಶ್ ಹೆಬ್ಬಾರ್ 16) ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು 17) ಶ್ರೀ ಸಿ.ಎಸ್ ರಾವ್ 18) ಶ್ರೀ ಯು ಅರವಿಂದ ಕುಮಾರ್ 19) ಶ್ರೀ ವಾದಿರಾಜ ರಾವ್ ಬನ್ನಂಜೆ 20) ಶ್ರೀ ಸುಧಾಕರ ರಾವ್ 21) ಶ್ರೀ ಪ್ರಕಾಶ್ ಕೋಲ್ಪೆ

## ನವರಾತ್ರಿಗೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದವರ ವಿವರ :

| | | |
|---|---|---|
| 10–10–2018 | : | ಸುಗಮ ಸಂಗೀತ – ಕುಮಾರಿ ಶ್ರಾವ್ಯ ರವಿಶಂಕರ, ಬೆಂಗಳೂರು |
| 11–10–2018 | : | ಭಕ್ತಿ ಸಂಗೀತ– ಕುಮಾರಿ ವೈ. ಮಾನಸ ರಾವ್ ಮತ್ತು ಶ್ರೀಮತಿ ವಿದ್ಯಾ ಎಸ್. ರಾವ್ |
| 12–10–2018 | : | ವೇಣುವಾದನ –ಶ್ರೀ ರವಿತೇಜ ಬೆಳ್ಳೆ |
| 13–10–2018 | : | ಯಕ್ಷ ಸಂಗೀತ– ಶ್ರೀ ಪ್ರವೀಣ್ ಕುಮಾರ್, ಕುಕ್ಕಿಕಟ್ಟೆ |
| 14–10–2018 | : | ಭರತನಾಟ್ಯ– ವಿದುಷಿ ಸೌಜನ್ಯಾ ಅಜಯ್ ರಾವ್, ಸಂತೆಕಟ್ಟೆ ಹಾಗೂ ವೀಣಾ ವಾದನ– ಕುಮಾರಿ ದಿಶಾ ಪಿ. ರಾವ್ ಉಡುಪಿ |
| 15–10–2018 | : | ಭಜನೆ –ಶ್ರೀ ಶಾರದಾ ಭಜನಾ ಮಂಡಳಿ, ಉಡುಪಿ ಹಾಗೂ ಹರಿಕಥೆ–ಬಕಾಸುರ ವಧೆ–ಶ್ರೀ ಮ.ನಾ ಹೆಬ್ಬಾರ್‌ರವರಿಂದ |
| 16–10–2018 | : | ಭಜನೆ– ಬ್ರಹ್ಮಾವರ ಭಜನಾ ತಂಡ |
| 17–10–2018 | : | ಭರತ ನಾಟ್ಯ– ಕುಮಾರಿ ಎಂ ಪ್ರೇರಣಾ ರಾವ್ |
| 18–10–2018 | : | ಭರತ ನಾಟ್ಯ– ವಿದುಷಿ ಡಾ. ಚೈತ್ರ ರಾವ್, ಪೆರ್ಣಂಕಿಲ |

## ಉದಯ ಚಂದ್ರ ಪ್ರತಿಭಾಪುರಸ್ಕಾರ :

ಎಸ್.ಎಸ್.ಎಲ್.ಸಿ

1) ಶ್ರೀ ಚಿನ್ಮಯಿ ಆರ್.ರಾವ್, ಶ್ರೀ ರಾಮಮೂರ್ತಿ ರಾವ್ ಮತ್ತು ಶ್ರೀಮತಿ ಅನುರಾಧಾ ರಾವ್ ಪೆರ್ಡೂರು, ಉಡುಪಿ ತಾಲೂಕು ಇವರ ಪುತ್ರ (617/625 = 98.72%)

ಪಿ.ಯು.ಸಿ (ವಿಜ್ಞಾನ)

ಶ್ರೀ ಶ್ರವಣ್‌ಕುಮಾರ್, ಶ್ರೀ ರಾಜ್‌ಕುಮಾರ್ ಎಸ್.ರಾವ್ ಮತ್ತು ಶ್ರೀಮತಿ ಯಶೋಧಾ ರಾವ್, ಕೋಟೇಶ್ವರ, ಕುಂದಾಪುರ ಇವರ ಪುತ್ರ (585/600 = 97.5%)

ಪಿ.ಯು.ಸಿ (ವಾಣಿಜ್ಯ)

ಶ್ರೇಯಾಂಕ, ಶ್ರೀ ಟಿ.ಎಸ್ ಶ್ರೀಧರ್ ರಾವ್ ಮತ್ತು ಶ್ರೀಮತಿ ಟಿ.ಎಸ್. ಸರಸ್ವತಿ, ಮಾರಿಕಟ್ಟೆ ಕೊಳಂಬೆ ಬ್ರಹ್ಮಾವರ ಇವರ ಪುತ್ರ (548/600 =91.3%)

## ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾಪುರಸ್ಕಾರ :

ಬಿ.ಸಿ.ಎ. 8ನೇ ರ್‍ಯಾಂಕ್ (2016–17ನೇ ಸಾಲಿನಲ್ಲಿ

ಕು। ಶ್ರೀರಕ್ಷಾ ರಾವ್, ಶ್ರೀ ಶ್ರೀಕಾಂತ ರಾವ್ ಮತ್ತು ಶ್ರೀಮತಿ ಶ್ರೀದೇವಿ, ಅಲೆವೂರು ಉಡುಪಿ ಇವರ ಪುತ್ರಿ

ಎಂ.ಎಸ್ಸಿ (ರಸಾಯನ ಶಾಸ್ತ್ರದಲ್ಲಿ 2 ನೇ ರ್‍ಯಾಂಕ್ 2017–18 ನೇ ಸಾಲಿನಲ್ಲಿ)

ಶ್ರೀದೇವಿ, ಶ್ರೀ ಸತ್ಯನಾರಾಯಣ ರಾವ್ ಮತ್ತು ಅರುಂಧತಿ ಎಸ್.ರಾವ್, ಕೊಕ್ರಾಡಿ, ಬೆಳ್ತಂಗಡಿ ತಾಲೂಕು ಇವರ ಪುತ್ರಿ

ಗೌರವ ಪುರಸ್ಕಾರ : 2017–18ರಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ರಾಜ್ಯಮಟ್ಟದ ಪರೀಕ್ಷೆಯಲ್ಲಿ 2ನೇ ಸ್ಥಾನ

ಕು। ಅದಿತಿ ಎ.ರಾವ್ ಮೈಸೂರು, ಶ್ರೀ ಚಿಟ್ಪಾಡಿ ಅಶೋಕ್ ರಾವ್ ಮತ್ತು ಶ್ರೀಮತಿ ಆಶಾ ಎ.ರಾವ್, ಮೈಸೂರು ಇವರ ಪುತ್ರಿ (524/525 = 99.8%)

## ವಿಜಯದಶಮಿಯ ವಿವಿಧ ಸ್ಪರ್ಧೆಗಳ ವಿಜೇತರ ವಿವರ :

**ಭಕ್ತಿಗೀತೆ :** 4 ನೇ ತರಗತಿವರೆಗೆ :–
ಗಗನ್ ಡಿ.ರಾವ್ (ಪ್ರಥಮ), ಭಾಗ್ಯಶ್ರೀ ಭಟ್ (ದ್ವಿತೀಯ), ಲಹರಿ (ತೃತೀಯ)

**ಭಕ್ತಿಗೀತೆ :** 5–8 ನೇ ತರಗತಿವರೆಗೆ :–
ಚಿನ್ಮಯಿ ರಾವ್ (ಪ್ರಥಮ), ಕೆ. ಸುಬ್ರಹ್ಮಣ್ಯ (ದ್ವಿತೀಯ), ನಿಹಾರಿಕಾ ರಾವ್ (ತೃತೀಯ)

**ಕಂಠಪಾಠ :** 4 ನೇ ತರಗತಿವರೆಗೆ :–
ಗಗನ್ ಟಿ ರಾವ್ (ಪ್ರಥಮ), ಅನನ್ಯ ಜಿ.ಎ (ದ್ವಿತೀಯ), ಲಹರಿ (ತೃತೀಯ)

**ಕಂಠಪಾಠ :** 5–8 ನೇ ತರಗತಿವರೆಗೆ :–
ಕೆ. ಸುಬ್ರಹ್ಮಣ್ಯ (ಪ್ರಥಮ), ಚಿನ್ಮಯಿ ರಾವ್ (ದ್ವಿತೀಯ), ಅನ್ವಿತ್ ಹೆಬ್ಬಾರ್ (ತೃತೀಯ)

**ಕಂಠಪಾಠ :** 9 ನೇ ತರಗತಿಯಿಂದ :–
ಶ್ರಾವ್ಯ ಆರ್ (ಪ್ರಥಮ), ಶರಣ್ಯ ಭಟ್ (ದ್ವಿತೀಯ), ಕೀರ್ತಿವರ್ಧನ್ (ತೃತೀಯ)

**ಚಿತ್ರಕಲೆ :** 4 ನೇ ತರಗತಿ ಒಳಗೆ :–
ಅದಿತಿ ಹೆಬ್ಬಾರ್ (ಪ್ರಥಮ), ಸಂಕಲ್ಪ ಶಾನುಭೋಗ್ (ದ್ವಿತೀಯ), ಅನನ್ಯ ಜಿ.ಎ (ತೃತೀಯ)

**ಚಿತ್ರಕಲೆ :** 5–8ನೇ ತರಗತಿವರೆಗೆ :–
ಅದಿತಿ (ಪ್ರಥಮ), ಸ್ಕಂದ ಸಂತೋಷ್ ರಾವ್ (ದ್ವಿತೀಯ), ಚಿರಾಗ್ (ತೃತೀಯ)

**ಚಿತ್ರಕಲೆ :** 9 ನೇ ತರಗತಿಯಿಂದ :–
ಆದಿತ್ಯ (ಪ್ರಥಮ), ಪಲ್ಲವಿರಾವ್ (ದ್ವಿತೀಯ), ಶ್ರಾವ್ಯಾ ರವಿಶಂಕರ್ (ತೃತೀಯ)

**ಚೂರ್ಣಿಕಾ :**
ಶ್ರಾವ್ಯಾ ರವಿಶಂಕರ್ (ಪ್ರಥಮ), ಶರಣ್ಯ (ದ್ವಿತೀಯ), ಸಮನ್ವಿತಾ ಭಟ್ (ತೃತೀಯ)

**ರಂಗವಲ್ಲಿ :** 5–8ನೇ ತರಗತಿ :–
ಸುಧಾಂಶುರಾವ್ (ಪ್ರಥಮ), ಅದಿತಿ (ದ್ವಿತೀಯ), ಅದ್ವಿತ್ (ತೃತೀಯ)

**ರಂಗವಲ್ಲಿ :** 9ನೇ ತರಗತಿಯಿಂದ :–
ರಕ್ಷಿತಾ ರಾವ್ (ಪ್ರಥಮ), ಮಹಿಮಾ ಎಸ್. ರಾವ್ (ದ್ವಿತೀಯ), ಅಪೂರ್ವ ರಾವ್ (ತೃತೀಯ)

## ವಿದ್ಯಾರ್ಥಿ ವೇತನ ವಿತರಣೆ :

ಪ್ರತಿ ವರ್ಷದಂತೆ ಈ ವರ್ಷವೂ ವಿಜಯದಶಮಿಯಂದು ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದೆ. ಪಿ.ಯು.ಸಿ.ಯ 61, ಪದವಿಯ 74, ಡಿಪ್ಲೋಮಾದ 12, ಬಿ.ಎಡ್.ನ 1, ಕಾನೂನಿನ 1, ಸ್ನಾತಕೋತ್ತರದ 25, ಬಿ.ಎ.ಎಂ.ಎಸ್.ನ 1, ಎಂ.ಬಿ.ಬಿ.ಎಸ್.ನ 1 ಹೀಗೆ ಒಟ್ಟು 176 ವಿದ್ಯಾರ್ಥಿಗಳಿಗೆ 3,67,000 ರೂಗಳನ್ನು ಚೆಕ್ ಮೂಲಕ ವಿದ್ಯಾರ್ಥಿ ವೇತನ ವಿತರಿಸಲಾಗಿದೆ.

## ಪ್ರಕಟಣೆ

ತಾ. 06.01.2019ರ ರವಿವಾರ ನಮ್ಮ ಸಂಘದ ವತಿಯಿಂದ ಉಡುಪಿಯ ಎಮ್.ಜಿ.ಎಮ್. ಮೈದಾನದಲ್ಲಿ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಹಾಗೂ ಶ್ರೀಶಾರದಾ ಮಂಟಪದಲ್ಲಿ ಮಹಿಳಾ ಮತ್ತು ಮಕ್ಕಳ ಕ್ರೀಡೋತ್ಸವ ನಡೆಯಲಿದೆ. ಆಸಕ್ತ ತಂಡಗಳು ಶ್ರೀಶಾರದಾ ಮಂಟಪದ ಮೆನೇಜರ್‌ನ್ನು 9448108920 ಅಥ 'ವಾ ಸಂಘದ ಕಾರ್ಯದರ್ಶಿಗಳನ್ನು 9343560647ನಲ್ಲಿ ಸಂಪರ್ಕಿಸಲು ಕೋರುತ್ತೇವೆ. ವಿವರಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿವೆ.

## ಕೃತಜ್ಞತಾರ್ಪಣೆ

ನವರಾತ್ರಿಯಲ್ಲಿ ಸಂಘದ ಆಡಳಿತ ಮಂಡಳಿಯು ನಿರ್ಣಯಿಸಿದಂತೆ ಎಲ್ಲಾ ಕಾರ್ಯಕ್ರಮಗಳೂ ವ್ಯವಸ್ಥಿತವಾಗಿ ನೆರವೇರಿತು. ಶ್ರೀ ದುರ್ಗಾನಮಸ್ಕಾರ ಪೂಜೆಯ ಕರ್ತೃಗಳಾಗಿ ಸಹಕರಿಸಿದವರಿಗೆ, ವಿವಿಧ ಸೇವೆ ಕೊಟ್ಟ ಭಕ್ತರಿಗೆ, ಪುರೋಹಿತರಾದ ಶ್ರೀ ಸತೀಶ್ ಭಟ್ ಮತ್ತು ಬಳಗದವರಿಗೆ, ಸಾಂಸ್ಕೃತಿಕ ಕಾರ್ಯಕ್ರಮ ಕೊಟ್ಟ ಕಲಾವಿದರಿಗೆ, ವಿಜಯದಶಮಿಯಂದು ಕರ್ತೃಗಳಾದ ಶ್ರೀ ಟಿ.ಆರ್. ಶ್ಯಾನುಭಾಗ್ ಮತ್ತು ಕುಟುಂಬಿಕರಿಗೆ, ಶ್ರೀ ಪಾವಂಜೆ ಜಗದೀಶ ಉಪಾಧ್ಯಾಯ ಮತ್ತು ಬಳಗದವರಿಗೆ, ಸುಬ್ರಹ್ಮಣ್ಯ ರಾವ್ ಪುತ್ತಿಗೆಯವರಿಗೆ, ಬಹುಮಾನ ಪ್ರಾಯೋಜಕರಿಗೆ, ತೀರ್ಪುಗಾರರಿಗೆ, ನಮ್ಮೊಂದಿಗೆ ಪ್ರತಿದಿನ ಸಹಕಾರ ನೀಡಿದ ಸಂಘದ ವಿವಿಧ ವೇದಿಕೆಗಳ ಸದಸ್ಯರಿಗೆ, ಎಲ್ಲಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನವರಾತ್ರಿಯ ಆಚರಣೆಯನ್ನು ಸಂಪನ್ನಗೊಳಿಸಿದ ನಮ್ಮ ಎಲ್ಲಾ ಸಮಾಜ ಬಾಂಧವರಿಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿ ಇದರ ಆಡಳಿತ ಮಂಡಳಿಯು ಕೃತಜ್ಞತೆ ಸಲ್ಲಿಸಿದೆ.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ



**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ–ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

**RAJESH POWER PRESS**


PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ಯಕ್ಷಗಾನ ಬೊಂಬೆಯಾಟ – ದಕ್ಷ ಕಲಾವಿದರ ಸೂತ್ರದಾಟ
## ಅಹಮದಾಬಾದ್‌ನಲ್ಲಿ ಅಬ್ಬರಿಸಿದ 'ನರಕಾಸುರ'




ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಆಶ್ರಯದಲ್ಲಿ ಗುಜರಾತ್‌ನ ಅಹಮದಾಬಾದ್‌ನಲ್ಲಿ ಐದು ದಿನಗಳ ಅಂತರ್‌ರಾಷ್ಟ್ರೀಯ ಕಲಾ ಸಮ್ಮೇಳನ 'ಶ್ರೇಷ್ಠ ಭಾರತ ಸಂಸ್ಕೃತಿ ಸಮಾಗಮ' ವೈವಿಧ್ಯಮಯ ಕಲಾಪ್ರಕಾರ ಗಳೊಂದಿಗೆ ಸಂಪನ್ನಗೊಂಡಿತು. ವಿಶ್ವವಿಖ್ಯಾತ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ಪ್ರಸ್ತುತ ಪಡಿಸಿದ 'ನರಕಾಸುರ ವಧೆ' ವಿಶೇಷ ಜನಮನ್ನಣೆ ಪಡೆಯಿತು.

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ನಿರ್ದೇಶಕರಾದ ಕೆ.ವಿ.ರಮೇಶ್‌ರವರು ಪ್ರಧಾನ ಸೂತ್ರಧಾರ ರಾಗಿದ್ದರು. ಪ್ರಾತಕ್ಷಕಿಯಲ್ಲಿ ಸೂತ್ರಧಾರರಾದ ಡಾ.ಓಂ ಪ್ರಕಾಶ ಕೆ.ವಿ., ಶ್ರೀವತ್ಸ ಕೆ.ವಿ., ಸುದರ್ಶನ ಕೆ.ವಿ., ಶ್ರೀಮತಿ ಗೀತಾ ವೇಣುಗೋಪಾಲ್, ಶ್ರೀ ಕುಮಾರಸ್ವಾಮಿ ಚಂದ್ರಶೇಖರ ವಿ. ಸಹಕರಿಸಿದರು. ತೆಂಕುತಿಟ್ಟು ಯಕ್ಷಗಾನ ಬೊಂಬೆಗಳ ಮುಖವರ್ಣಿಕೆ, ವೇಷಭೂಷಣ, ಮಾತುಗಾರಿಕೆ, ಕುಣಿತ ಮಣಿತ, ಶ್ರುತಿಮಧುರವಾದ ಭಾಗವತಿಕೆ, ಚೆಂಡೆ–ಮದ್ದಳೆಯ ನಾದವೈಭವ ಕಲಾಹೃದಯಿಗಳ ಮನಸ್ಸನ್ನು ಮುದಗೊಳಿಸಿತು.

ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಈ ಸಾಂಸ್ಕೃತಿಕ ಉತ್ಸವದಲ್ಲಿ ಸಂಗೀತ, ನಾಟಕ, ಜಾನಪದ ಕಲೆಗಳ ಅನೇಕ ಪ್ರಸಿದ್ಧ ನಾಮರು ಭಾಗವಹಿಸಿದ್ದರು. ಕಥಕ್‌ನ ಸೋನಾಲ್ ಮಾನಸಿಂಗ್, ಹಿಂದೂಸ್ಥಾನೀ ಸಂಗೀತ ಕಲಾವಿದ ಪರ್ವಿನ್ ಸುಲ್ತಾನಾ, ಕರ್ನಾಟಕ ಶಾಸ್ತ್ರೀಯ ಸಂಗೀತದ ಟಿ.ಎನ್. ಕೃಷ್ಣನ್, ಭರತನಾಟ್ಯದ ಹಿರಿಯ ಕಲಾವಿದೆ ಮಾಳವಿಕಾ ಸರುಕ್ಕಾ, ವೀಣಾವಾದನದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಸುಮಾ ಸುಧೀಂದ್ರ, ಚಿತ್ರನಟಿ ಬಿ. ಜಯಶ್ರೀ, ನಾಡೋಜ ವೀರಣ್ಣ ಬೆಳಗಲ್ಲು ಮೊದಲಾದವರು ಬೊಂಬೆಯಾಟದ ತಂಡವನ್ನು ಅಭಿನಂದಿಸಿ ಮಾತನಾಡಿದರು.

# ಕಾಂತಾವರ ಕನ್ನಡ ಸಂಘದಲ್ಲಿ ಶ್ರೀ ಮ.ನಾ ಹೆಬ್ಬಾರರಿಂದ ಉಪನ್ಯಾಸ



ಕಾರ್ಕಳ ತಾಲೂಕಿನ ಪ್ರತಿಷ್ಠಿತ ಕಾಂತಾವರ ಕನ್ನಡ ಸಂಘದಲ್ಲಿ ಇತ್ತೀಚೆಗೆ, ಹರಿದಾಸರೂ, ಸಾಹಿತಿಗಳೂ, ನಿವೃತ್ತ ಉಪನ್ಯಾಸಕರೂ ಆದ ಶ್ರೀ ಮ.ನಾ.ಹೆಬ್ಬಾರರಿಂದ 'ಕುಮಾರವ್ಯಾಸ ಕವಿಯ ಗದುಗು ಭಾರತದಲ್ಲಿ ರೂಪಕ ಪ್ರಪಂಚ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಕಾರ್ಯಕ್ರಮವು ಜರಗಿತು. ಇದು ಅಲ್ಲಿನ ಕನ್ನಡ ಸಂಘದ 'ತಿಂಗಳ ನುಡಿನಮನ' ಕಾರ್ಯಕ್ರಮವಾಗಿತ್ತು. ಶ್ರೀ ಮ.ನಾ.ಹೆಬ್ಬಾರರು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಪಡೆದ ಮಹಾಕವಿ ಕುಮಾರವ್ಯಾಸನ ಗದುಗು ಭಾರತದಲ್ಲಿ ರೂಪಕಾಲಂಕಾರ ಸನ್ನಿವೇಶಗಳನ್ನು ಹೆಕ್ಕಿ, ತತ್ಸಬಂಧ ಪದ್ಯಗಳ ಉದಾಹರಣೆ ಸಮೇತ ಒಂದೂವರೆ ಗಂಟೆಗಳ ಕಾಲ ರಸವತ್ತಾದ ಉಪನ್ಯಾಸವನ್ನಿತ್ತರು. ಕಾರ್ಯಕ್ರಮವಿತ್ತ ಶ್ರೀ ಮ.ನಾ ಹೆಬ್ಬಾರರು ಮತ್ತು ಗಣಪತಿ ಪದ್ಯಾಣ ಇವರುಗಳನ್ನು ನೆನಪಿನ ಕಾಣಿಕೆಯೊಂದಿಗೆ ಸನ್ಮಾನಿಸಲಾಯಿತು.



ಬಾರ್ಕೂರಿನ ನೇಶನಲ್ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ನಡೆದ ಶ್ರೀ ಗಜಮುಖ ಹರಿಹರ ಯಕ್ಷಗಾನ ಕಲಾವೇದಿಕೆ, ಯಡ್ತಾಡಿ ಇದರ ಯಕ್ಷಗುರು ಶ್ರೀ ಕೆ. ಮಂಜುನಾಥ ಕುಲಾಲ್ ಇವರ ದಿಗ್ದರ್ಶನದಲ್ಲಿ 'ವೀರಮಣಿ ಕಾಳಗ'ದಲ್ಲಿ ಶ್ರೀ ರಾಮನ ಪಾತ್ರದಲ್ಲಿ ಶ್ರೀ ವೈ. ಮೋಹನ್‌ರಾವ್.


ಎಲ್.ನಂ.31017 ಫೋನ್ : 2522408

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಶೈಟಿ (ನಿ.)**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

**ಗುಮಾಸ್ತ ಹುದ್ದೆಗೆ ಅರ್ಜಿ ಆಹ್ವಾನ**

ಶ್ರೀ ಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ (ನಿ.), ಉಡುಪಿ ಇಲ್ಲಿ ಗುಮಾಸ್ತ ಹುದ್ದೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಪದವಿ ಶಿಕ್ಷಣದೊಂದಿಗೆ ಕಂಪ್ಯೂಟರ್ ಜ್ಞಾನವನ್ನು ಹೊಂದಿರತಕ್ಕದ್ದು. ಆಸಕ್ತಿಯುಳ್ಳ 30 ವರ್ಷ ಒಳಪಟ್ಟ ಅಭ್ಯರ್ಥಿಗಳು ತಮ್ಮ ಪದವಿಶಿಕ್ಷಣ, ಕಂಪ್ಯೂಟರ್ ಜ್ಞಾನದ ಪ್ರಮಾಣಪತ್ರ, ಅಂಕಪಟ್ಟಿ, ಅನುಭವದ ಪ್ರಮಾಣಪತ್ರ, ಮತ್ತಿತರ ದಾಖಲೆಗಳೊಂದಿಗೆ ತಾ.20–12–2018ರ ಒಳಗೆ ಸಂಘದ ಈ ಮೇಲಿನ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕು.

– ಕಾರ್ಯದರ್ಶಿ


# ಯಕ್ಷಗಾನ ತರಬೇತಿ ಕೇಂದ್ರ ಉದ್ಘಾಟನೆ



ಬೆಳುವಾಯಿಯಲ್ಲಿ ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿಯ ವತಿಯಿಂದ ಯಕ್ಷಗಾನನಾಟ್ಯ, ಚೆಂಡೆ–ಮದ್ದಳೆ ತರಬೇತಿ ಶಾಲೆಯ ಉದ್ಘಾಟನೆಯನ್ನು ಹಿರಿಯ ವಿದ್ವಾಂಸರು, ವಿಮರ್ಶಕರು, ಅರ್ಥದಾರಿಗಳಾದ ಡಾ.ಜೋಶಿ ಇತ್ತೀಚೆಗೆ ನೆರವೇರಿಸಿದರು. ಈ ಸಂದರ್ಭದಲ್ಲಿ ಅವರು ಎಳೆಯ ವಯಸ್ಸಿನಲ್ಲೇ ಯಕ್ಷಗಾನ ಕಲೆಯ ಆಸಕ್ತಿಯನ್ನು ಮಕ್ಕಳು ಬೆಳೆಸಿಕೊಳ್ಳುವುದು ಉತ್ತಮ. ಇದರಿಂದ ಮುಂದೆ ಕಲಾವಿದನಾಗದಿದ್ದರೂ ಉತ್ತಮ ಪ್ರೇಕ್ಷಕನೋ, ಕಲಾಪೋಷಕನೋ ಆಗಬಹುದು. ಮತ್ತು ಸಂಸ್ಕಾರವಂತ ಸಹೃದಯಿಯಾದ ವ್ಯಕ್ತಿಯಾಗುವುದಕ್ಕೆ ಸಂಶಯವಿಲ್ಲ ಎಂದು ನುಡಿದರು. ವೇದಿಕೆಯಲ್ಲಿ ಬಿಲ್ಲವ ಸಂಘದ ಅಧ್ಯಕ್ಷ ರಾಜೇಶ ಸುವರ್ಣ, ಗ್ರಾಮ ಪಂಚಾಯತಿ ಅಧ್ಯಕ್ಷ ಭಾಸ್ಕರ ಆಚಾರ್ಯ, ಉದ್ಯಮಿ ಭಾಸ್ಕರ ಎಸ್. ಕೋಟ್ಯಾನ್ ಉಪಸ್ಥಿತರಿದ್ದರು. ಸಂಸ್ಥೆಯ ಸ್ಥಾಪಕಾಧ್ಯಕ್ಷ ಎಮ್. ದೇವಾನಂದ ಭಟ್ ಸಂಸ್ಥೆಯ ಹಾಗೂ ಯಕ್ಷಗಾನ ತರಬೇತಿಯ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಇನ್ನು ಮುಂದೆ ಪ್ರತೀ ಶನಿವಾರ ಸಂಜೆ ತರಬೇತಿ ನೀಡಲಾಗುವುದು. ಆಸಕ್ತರು ಶ್ರೀ ದೇವಾನಂದ ಭಟ್ ಇವರನ್ನು 9845644556ರಲ್ಲಿ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ಜಲಜಾ ಸ್ಕಿನ್ ಕ್ಲಿನಿಕ್ ಶುಭಾರಂಭ




ಉಡುಪಿಯ ಖ್ಯಾತ ಚರ್ಮರೋಗ ತಜ್ಞ ಡಾ। ಸನತ್ ಎಸ್. ರಾವ್ ಇವರು ತಮ್ಮ ಕ್ಲಿನಿಕ್ ಜಲಜ ಸ್ಕಿನ್ ಕೇರ್ ಕ್ಲಿನಿಕ್ ಅನ್ನು ಉಡುಪಿಯ ಹಳೆ ಪೋಸ್ಟ್ ಆಫೀಸು ರಸ್ತೆಯಲ್ಲಿರುವ ಸಾಯಿ ಹರ್ಷ ಕಟ್ಟಡದಲ್ಲಿರುವ ತಮ್ಮ ಸ್ವಂತ ಸ್ಥಳಕ್ಕೆ ಸ್ಥಳಾಂತರಿಸಿ ತಾ 19–10–2018ರಂದು ಶುಭಾರಂಭ ಮಾಡಿದರು. ಈ ಸಮಾರಂಭಕ್ಕೆ ನಮ್ಮ ಸಮಾಜದ ಹಿರಿಯ ವೈದ್ಯರಾದ ಡಾ। ಪಿ. ವಿಠಲ್ ರಾವ್, ಡಾ। ಪಿ.ಜಿ ರಾವ್ ಹಾಗೂ ಇತರರು ಆಗಮಿಸಿ ಶುಭ ಹಾರೈಸಿದರು.




# ನಿಯಮಬದ್ಧ ಜೀವನ–ಆರೋಗ್ಯವಂತ ಸುಖ ಜೀವನ

–ಎನ್.ಪದ್ಮನಾಭ ರಾವ್, ಬೆಂಗಳೂರು

ಹಿಂದಿನ ಕಾಲದಲ್ಲಿ ಹೆಚ್ಚಿನ ಜನರು ತಮ್ಮ ಜೀವನವನ್ನು ಇದ್ದುದರಲ್ಲಿ ಸಂತೃಪ್ತಿಯನ್ನು ಪಡೆಯುತ್ತಿದ್ದರು. ಮತ್ತು ಆರೋಗ್ಯದ ದೃಷ್ಟಿಯಿಂದಲೂ ಉತ್ತಮ ಆರೋಗ್ಯ ಕಾಪಾಡಿಕೊಂಡು ನೆಮ್ಮದಿಯ ಜೀವನ ನಡೆಸುತ್ತಿದ್ದರು. ಆದರೆ ಈಗ ಜನರ ಜೀವನವು ಆತಂಕ, ಅತೃಪ್ತಿ, ಬೇಸರ, ದುಃಖ ದುಮ್ಮಾನಗಳಿಂದ ಕೂಡಿದೆ. ಮನುಷ್ಯನ ಮನಸ್ಸಿಗೆ ತೃಪ್ತಿ ಎಂಬುದು ಇಲ್ಲ ಬದುಕಿಗೆ ಬೇಕು–ಬೇಡಗಳ ಬಗ್ಗೆ ಚೌಕಟ್ಟು ಎಂಬುದಿಲ್ಲ. ಯಾವುದೇಆಚಾರ–ವಿಚಾರಗಳಿಗೆ ಲಕ್ಷ್ಮಣ ರೇಖೆ ಎಂಬುದಿಲ್ಲ. ಎಲ್ಲಾ ವಿಚಾರದಲ್ಲೂ ನಾನು–ನನ್ನದು, ನನ್ನ ಸಂಸಾರ ಇದಕ್ಕೆಲ್ಲ ಸೀಮಿತವಾಗಿ, ಮುಂದಕ್ಕೆ ತನ್ನಂತೆ ಪರರೂ ಇದ್ದಾರೆ, ಅವರಿಗೂ ನಮ್ಮಂತೆ ಇರಲು ಅವಕಾಶವಿದೆ ಎಂಬ ವಿಶಾಲ ಮನೋಭಾವನೆ ಯಿಂದ ದೂರವಾಗಿದ್ದು ಸ್ವಾರ್ಥಿಯಾಗಿದ್ದಾನೆ. ನೀನೂ ಬದುಕು–ಇತರರನ್ನೂ ಬದುಕಲು ಬಿಡು ಎಂಬ ಭಾವನೆ ಮಾಯವಾಗಿ ಮನುಷ್ಯ ನಿಷ್ಕರುಣಿಯಾಗಿರುವನು. ಈ ಸ್ವಾರ್ಥ ಮನೋಭಾವದಿಂದ ಮನುಷ್ಯನ ಮನಸ್ಸಿನ ಆಸೆಯು, ಪ್ರತಿಯೊಂದು ವಿಚಾರದಲ್ಲೂ ಹೆಚ್ಚಾಗಿ ದುರಾಸೆಯು ಹುಟ್ಟುತ್ತದೆ. ಈ ದುರಾಸೆಯೇ ಮನುಷ್ಯನಿಗೆ ಮುಂದಕ್ಕೆ ಮುಳ್ಳಾಗಿ ಪರಿಣಮಿಸಿ ಅವನ ಮೈ (ದೇಹ) ಮನ(ಮನಸ್ಸು) ಎರಡೂ ಹಾಳಾಗುವುದಲ್ಲದೆ ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸಿ ಮುಂದಕ್ಕೆ ಹಾಳು ಮಾಡುತ್ತದೆ. ಮನುಷ್ಯ ತನ್ನ ಜೀವನದ ಮೂಲ ಉದ್ದೇಶವನ್ನೇ ಮರೆತು ಸ್ವಾರ್ಥಿಯಾಗಿ, ಕ್ಷಣಿಕ ಸುಖಕ್ಕಾಗಿ ಬಾಳನ್ನು ಗೋಳು ಮಾಡಿಕೊಳ್ಳುತ್ತಿದ್ದಾನೆ. ಅದೇ ತನ್ನ ಜೀವನವನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡಲ್ಲಿ ಬಾಳು ಹಸನಾಗುವುದು. ಅದನ್ನು ಬಿಟ್ಟು ದುರಾಸೆಯ ಬೆನ್ನು ಹತ್ತಿ ಅಡ್ಡ ದಾರಿ ಹಿಡಿದು ಹೋದಲ್ಲಿ ಅನ್ಯಾಯ ಮಾರ್ಗದಿಂದ ತನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ಕ್ಷಣಿಕ ಲಾಭ ಪಡೆಯಬಹುದು. ಆದರೆ ಇದರಿಂದ ನಮ್ಮನ್ನು ನಾವು ಮೋಸ ಮಾಡಿಕೊಂಡು ಬೇರೆಯವರಿಗೆ ಮೋಸ ಮಾಡಿದಂತಾಗುವುದು. ಇಂದಿನ ಜೀವನ ಬರೇ ಧನ ಸಂಪಾದನೆ, ಅಧಿಕಾರದ ಆಸೆ ಹಾಗೂ ಮೋಜಿನ ಜೀವನದ ಹಂಬಲ–ಇವುಗಳ ಮೇಲೆ ಮಾತ್ರ ಕೇಂದ್ರೀಕೃತವಾಗಿದೆ. ಇದನ್ನು ಪಡೆಯಲು ಮನುಷ್ಯನು ಯಾವ ಕೀಳು ಮಟ್ಟಕ್ಕಾದರೂ ಇಳಿಯಲು ಹೇಸುವುದಿಲ್ಲ. ಹಣಸಂಪಾದನೆ, ಅಧಿಕಾರ ಹಾಗೂ ಮೋಜು ಮಾಡುವುದು ಬೇಕು, ಆದರೆ ಅದಕ್ಕೂ ಮಿತಿ ಇರಬೇಕು, ರೀತಿ ನೀತಿ ಇರಬೇಕು. ಹಾಗೂ ತನ್ನಂತೆ ಇತರರಿಗೂ ಅವಕಾಶ ಇರಬೇಕು ಎಂಬ ಪ್ರಜ್ಞೆ ಇರಬೇಕು ಮತ್ತು ಹೃದಯ ಶ್ರೀಮಂತಿಕೆ ತೋರಬೇಕು. ದುರಂತವೆಂದರೆ ಈಗಿನ ಜಗತ್ತಿನಲ್ಲಿ ಇವುಗಳಿಗೆ ಪ್ರಾಮುಖ್ಯತೆ ಹಾಗೂ ಮನ್ನಣೆ. ಆದರೆ ಇದು ಜೀವನದ ಪ್ರಮುಖ ಉದ್ದೇಶವಲ್ಲ. ಇದರಿಂದ ಇಂದಿನ ಪರಿಸ್ಥಿತಿಯಲ್ಲಿ ಮನುಷ್ಯನು ಮುಖ್ಯವಾಗಿ ಮನುಷ್ಯತ್ವವನ್ನೇ ಕಳೆದುಕೊಳ್ಳುತ್ತಿದ್ದಾನೆ. ಬದುಕಿನ ಮೂಲ ಉದ್ದೇಶವನ್ನೇ ಮರೆಯುತ್ತಿದ್ದಾನೆ. ಕೆಟ್ಟ ಹಂಬಲದಿಂದ ಮನಸ್ಸು ಕೆಡುತ್ತದೆ, ಆರೋಗ್ಯ ಕೆಡುತ್ತದೆ. ಜಗತ್ತಿನಲ್ಲಿ ತಾನಾಯಿತು, ತಾನು ಮಾಡಿದ್ದಾಯಿತು. ಅದೆಲ್ಲಾ ಸರಿ ಎಂಬ ಉದ್ಧಟತನ ಇದರಿಂದಾಗಿ ಮನುಷ್ಯ ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ವರ್ತಿಸಿ ತನ್ನ ಅದಃಪತನವನ್ನು ತಾನೇ ಬರಮಾಡಿಕೊಳ್ಳುವ ಅಪಾಯದ ಅಂಚಿಗೆ ತಲುಪಿದ್ದಾನೆ. ಪರಿಣಾಮ–ಜೀವನದಲ್ಲಿ ಒತ್ತಡ, ಅವಿಶ್ರಾಂತ, ಅನಾರೋಗ್ಯ ಹಾಗೂ ಮಾನಸಿಕ ಅನಾರೋಗ್ಯದ ಚಿಂತೆಯಿಂದ ಬಳಲುತ್ತಿದ್ದಾನೆ.

ಈ ಎಲ್ಲಾ ವಿಚಾರಗಳಿಗೆ ಮನುಷ್ಯನಿಗೆ ದೈನಂದಿನ ಜೀವನದಲ್ಲಿ ಸಾಮಾನ್ಯ ಕಟ್ಟುಪಾಡುಗಳನ್ನು ಅನುಸರಿಸಿದ್ದಲ್ಲಿ ಅವನು ಜೀವನದಲ್ಲಿ ಸುಖ, ಶಾಂತಿ ಮತ್ತು ನೆಮ್ಮದಿಯನ್ನು ಕಾಣಬಹುದು. ಅದಕ್ಕೆ ಮುಖ್ಯವಾಗಿ ಸರಳ ಜೀವನದ ನಾಂದಿಯನ್ನು ಹಾಡಬೇಕು. ಇದನ್ನು ಅನುಷ್ಠಾನಗೊಳಿಸ ಬೇಕಾದರೆ ಜೀವನದಲ್ಲಿ ಕೆಲವು ನಿಯಮಗಳನ್ನು ದೈನಂದಿನ ಕಾರ್ಯದಲ್ಲಿ ಅಳವಡಿಸಿಕೊಳ್ಳಬೇಕು. ಅದಕ್ಕೆ ಮುಖ್ಯವಾಗಿ 'ತನ್ನಂತೆ ಪರರ ಬಗೆ ಕೈಲಾಸ ಬಿನ್ನಾಣವಕ್ಕು' ಎಂಬ ಸರ್ವಜ್ಞನ ಯುಕ್ತಿಯಂತೆ ನಾಡಿಯಲ್ಲಿ ಮತ್ತು ನಡೆಯಲ್ಲಿ ಕಾರ್ಯ–ವಾಚಾ–ಮನಸಾ ಕಾಣಬೇಕು. ನಮ್ಮ ಜೀವನದಲ್ಲಿ ಶಿಸ್ತಿನ ಜೀವನದ ಚೌಕಟ್ಟಿನ ಒಳಗೆ ಅಳವಡಿಸಿಕೊಳ್ಳಬೇಕು. ಮೊದಲಿಗೆ ಕಷ್ಟವೆಂದು ಕಂತು ಬಂದರೂ ನಿಧಾನವಾಗಿ ಶಾಂತಿ ಹಾಗೂ ನೆಮ್ಮದಿಯ ಜೀವನ ನಡೆಸಲು ಪೂರಕವಾಗುವುದು. ಮೊದಲಿಗೆ ಯಾವುದೇ ವಿಚಾರವು ಕಷ್ಟವೆಂದು ಕಂಡರೂ ಮುಂದಕ್ಕೆ ರೂಢಿಯಾಗಿ ಬಾಳಿಗೆ ಒಂದು ಅರ್ಥವನ್ನು ನೀಡುತ್ತದೆ. ಆಗ ಜೀವನಕ್ಕೆ ಬೆಲೆ ಬಂದು ಸಾರ್ಥಕತೆಯನ್ನು ಕಾಣಬಹುದು. ಇದರಿಂದ 'ಸರ್ವೇಜನಾಃ ಸುಖೀನೋಭವಂತು'–ಎಂಬ ವಿಚಾರಕ್ಕೆ ನಮ್ಮ ಪಾಲಿನ ಅಳಿಲು ಸೇವೆ ನೀಡಿದಂತಾಗುವುದು. ಮುಖ್ಯವಾಗಿ ನಮಗೆ ನಮ್ಮ ಜೀವನದಲ್ಲಿ 'ಲಕ್ಷ್ಮಣ ರೇಖೆ' ಇರಬೇಕು. ಯಾವುದೇ ವಿಚಾರದಲ್ಲಿ ಮಿತಿ ಮೀರಿ ಮನುಷ್ಯ ತನ್ನ ಸ್ವಾರ್ಥ ಬುದ್ಧಿಯಿಂದ ಇನ್ನೊಬ್ಬರಿಗೆ ತೊಂದರೆಯಾಗುವ ರೀತಿಯಲ್ಲಿ ಜೀವನವನ್ನು ನಡೆಸಬಾರದು. ಜೀವನವನ್ನು 'ವಸುದೈವ ಕುಟುಂಬಕಂ' ಎಂಬ ವಿಶಾಲವಾದ ಮನೋಭಾವದಿಂದ ಸ್ವೀಕರಿಸಬೇಕು. ಬಾಳಿಗೆ ಗುರಿ ಇದ್ದಲ್ಲಿ ಮಾತ್ರ ಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳಬಹುದು. ಮಿತ ಯಾವಾಗಲೂ ಹಿತ ಎಂಬ ಉಕ್ತಿಯಂತೆ ತಾನೂ ನೆಮ್ಮದಿಯಿಂದ ಬದುಕಿ ಬೇರೆಯವರಿಗೂ ಅವಕಾಶ ಮಾಡಿಕೊಟ್ಟಲ್ಲಿ ಬದುಕು ಹಸನಾಗುವುದು.

ಮನುಷ್ಯ ಜೀವನ ಪಾವನವಾಗಬೇಕಾದರೆ ಅದಕ್ಕೆ ನಾವೇ ನಮ್ಮನ್ನು ಸನ್ಮಾರ್ಗದಲ್ಲಿ ಅಳವಡಿಸಿಕೊಳ್ಳಬೇಕು. 'ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡದಿರಿ ಹುಚ್ಚಪ್ಪಗಳಿರ' ಎಂದಂತೆ ಅದಕ್ಕೆ ಅರ್ಥ ಬರುವಂತೆ ಬಾಳಿದರೆ ಮಾತ್ರ ಸಾರ್ಥಕತೆ ಬರುವುದು. ಇದಕ್ಕೆ ನಮ್ಮ ದೈನಂದಿನ ಜೀವನದಲ್ಲಿ ಸರಳ ಕಟ್ಟುಪಾಡುಗಳನ್ನು ಅಳವಡಿಸಬೇಕು. ಅದು ಏನೆಂದರೆ ನಾವು ಮಾಡುವ ಯಾವುದೇ ಕಾರ್ಯವು ತ್ರಿಕರಣ ಶುದ್ಧಿಯಿಂದ ಕಾಯ–ವಾಚಾ–ಮನಸಾ ಕೂಡಿರಬೇಕು. ಎಲ್ಲಾ ವಿಚಾರವನ್ನು ಆ ಭಗವಂತನಿಗೆ ಅರ್ಪಿಸಿ ನಿಷ್ಪ್ರಹನಾಗಿ ಕಾರ್ಯನಿರ್ವಹಿಸಬೇಕು. ನಾವು ಮಾಡುವ ಯಾವುದೇ ಕಾರ್ಯಗಳು ಮೂರು 'ಡಿ' ಗಳಿಂದ ಕೂಡಿರಬೇಕು. ಇದರಿಂದ ಗುರಿ ಮುಟ್ಟಬಹುದು.

ಮೊದಲನೇಯದಾಗಿ ನಾವು ಮಾಡುವ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂದರೆ ಅರ್ಪಣಾ ಮನೋಭಾವ, ಎರಡನೇಯದಾಗಿ ಮಾಡುವ ಕಾಯಕದ ಬಗ್ಗೆ ಸಂಪೂರ್ಣ ವಿಶ್ವಾಸವಿಟ್ಟು ಕೆಲಸ ಮಾಡಿಯೇ ಮುಗಿಸುವೆನೆಂಬ ಧೃಢ ಮನಸ್ಸು ಮತ್ತು ಮೂರನೇಯದಾಗಿ ಯಾವುದೇ ಕೆಲಸವನ್ನು ಶಿಸ್ತಿನಿಂದ ಕ್ರಮಬದ್ಧವಾಗಿ ಮಾಡಬೇಕು. ಹೀಗೆ ಅರ್ಪಣಾ ಮನೋಭಾವದಿಂದ ಕಾರ್ಯ ನಿರ್ವಹಿಸಿದ್ದಲ್ಲಿ ಖಂಡಿತವಾಗಿಯೂ ಜಯ ಲಭಿಸುವುದು. ಹಾಗೂ ಕಾರ್ಯ ಮಾಡಿದ ಬಗ್ಗೆ ಆತ್ಮತೃಪ್ತಿ ಸಿಗುವುದು. ಇದಕ್ಕೆ ಬೇಕು ಜೀವನದಲ್ಲಿ ಸರಳತನ, ನಿಷ್ಕಪಟತನ ಮತ್ತು ಕಾರ್ಯತತ್ಪರತೆಯನ್ನು ಮೈಗೂಡಿಸಿ ಕೊಳ್ಳಬೇಕು. ನಮ್ಮ ದೈನಂದಿನ ದಿನಚರಿಯಲ್ಲಿ 1) ವ್ಯಾಯಾಮವನ್ನು ಆರೋಗ್ಯದ ಹಿತದೃಷ್ಟಿಯಿಂದ ಕಡ್ಡಾಯವಾಗಿ ಮಾಡಬೇಕು. 2) ಆಧ್ಯಾತ್ಮದ ಬಗ್ಗೆ ಮನುಷ್ಯನಲ್ಲಿ ಜಾಗೃತೆಗೊಳಿಸಬೇಕು. ಇದರಿಂದ ಸಾತ್ವಿಕತೆ ಮತ್ತು ಸಚ್ಚಾರಿತ್ರ್ಯವನ್ನು ಬೆಳೆಸಿಕೊಳ್ಳಬಹುದು. 3) ಮನಸ್ಸಿನಲ್ಲಿ ವಿಚಾರ ತುಂಬಲು ಹಾಗೂ ಬಿಡುವಿನ ಸಮಯ ಸದುಪಯೋಗ ಪಡಿಸಿಕೊಳ್ಳಲು ಉತ್ತಮ ಗ್ರಂಥಗಳನ್ನು ಓದಬೇಕು. 4) ವೃತ್ತಿಯೊಂದಿಗೆ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಈ ಪ್ರವೃತ್ತಿಯಿಂದ ಬಿಡುವಿನ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಬಹುದು.5) ಯಾವುದೇ ಕಾಯಕವನ್ನು ಮಾಡುವಾಗ ನಿಸ್ವಾರ್ಥ ದೃಷ್ಟಿಯಿಂದ ಪ್ರಾಮಾಣಿಕವಾಗಿ ನಿರ್ವಹಿಸಿದ್ದಲ್ಲಿ ತಕ್ಕ ಪ್ರತಿಫಲ ದೊರಕುವುದು. ಅಂದರೆ ಕಾಯಕವೇ ಕೈಲಾಸ ಎಂಬ ನಿಸ್ವಾರ್ಥ ಭಾವನೆಯಿಂದ ಕಾಯಕವನ್ನು ಮಾಡಬೇಕು. ಭಗವದ್ಗೀತೆಯ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ತಿಳಿಸುವಂತೆ ಯಾವುದೇ ಕಾಯಕವನ್ನು ಪ್ರತಿಫಲ ಅಪೇಕ್ಷೆ ಇಲ್ಲದೇ ಮಾಡಿದ್ದಲ್ಲಿ ಪರಮಾತ್ಮನನ್ನು ಪಡೆಯಬಹುದು. ಹೀಗಾಗಿ ಒಟ್ಟಿನಲ್ಲಿ ನಾವು ನಮ್ಮ ದೈನಂದಿನ ಬದುಕನ್ನು ಶಿಸ್ತಿನಿಂದ ನಿಯಮಬದ್ಧ ಜೀವನವನ್ನು ಮೈ–ಮನಸ್ಸನ್ನ ದುಡಿಸಿ ಹದ್ದು ಬಸ್ತಿನಲ್ಲಿಟ್ಟುಕೊಂಡು ಅದಕ್ಕೆ ಆಧ್ಯಾತ್ಮಿಕ ಮತ್ತು ಜ್ಞಾನಾರ್ಜನೆಯನ್ನು ಉಣಬಡಿಸಿ ಕಾಯಕವನ್ನು ತ್ರಿಕರಣ ಶುದ್ಧಿಯಿಂದ ಅರ್ಪಣಾಮನೋಭಾವದಲ್ಲಿ ಮಾಡಿದರೆ ನಮ್ಮ ಜೀವನ ಪಾವನವಾಗಬಹುದೆಂದು ಹೇಳಬಹುದು.

## ಅಲ್ಲಲ್ಲಿ ಕಾರ್ಯಕ್ರಮಗಳು...



ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಸಂದರ್ಭದಲ್ಲಿ ಕಾಸರಗೋಡಿನ ವಿದುಷಿ ಶ್ರೀಮತಿ ರಾಧ ಮುರಳೀಧರ ಇವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಿದರು. ಮೃದಂಗದಲ್ಲಿ ಡಾ.ಶಂಕರ್‌ರಾಜ್ ಹಾಗೂ ವಯಲಿನ್ನಲ್ಲಿ ಶ್ರೀಮತಿ ನಯನರಾಜ್ ಸಹಕರಿಸಿದರು.



ಬೆಂಗಳೂರಿನ ಆರ್.ಎಮ್.ನಗರದ ಕಿಡ್ಸ್‌ಶಾಲೆಯಲ್ಲಿ ಶ್ರೀ ಎಂ. ಕೆ. ಕೃಷ್ಣಯ್ಯ ಇವರಿಂದ ನಡೆದ ಅಂಚೆಚೀಟಿ ಪ್ರದರ್ಶನ.



ಪುತ್ತೂರಿನ ಮತತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ತಾ. 09–10–2018 ನವರಾತ್ರಿ ಪ್ರಥಮ ದಿನದಂದು ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿ ವತಿಯಿಂದ ಭಜನಾ ಸೇವೆ ಜರಗಿತು. ಹಾರ್ಮೋನಿಯಂನಲ್ಲಿ ಶ್ರೀ ಹರಿನಾರಾಯಣ ರಾವ್, ತಬಲಾದಲ್ಲಿ ಶ್ರೀ ರವಿಕಿರಣ್ ಸಹಕರಿಸಿದರು. ಶ್ರೀ ಪಿ. ಶ್ರೀಕಾಂತ್ ರಾವ್, ಕಾರ್ಯಕ್ರಮ ಸಂಯೋಜಿಸಿದರೆ. ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಪ್ರಮೋದ್ ಕುಮಾರ್ ಕೇದಗೆ, ಶ್ರೀ ಅನಿಲ ರಾವ್ ಬಿ. ಎಸ್. ವ್ಯವಸ್ಥೆಗಳಲ್ಲಿ ಸಹಕರಿಸಿದರು.

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ ಚಂಡಿಕಾ ಹೋಮ ಸಂಪನ್ನ



ಪಡುಬಿದ್ರಿಯಲ್ಲಿರುವ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ನವರಾತ್ರಿ ಮಹೋತ್ಸವದ ಪ್ರಯುಕ್ತ ತಾರೀಕು 17–10–2018 ನೇ ಬುಧವಾರ ದುರ್ಗಾಷ್ಟಮಿ ದಿವಸದಂದು ಸಾರ್ವಜನಿಕ ಶ್ರೀ ಚಂಡಿಕಾ ಹೋಮವು ಸಂಪನ್ನಗೊಂಡಿತು. ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಈ ಕಾರ್ಯಕ್ರಮವು ಜರಗಿದ್ದು, ಸುಮಾರು 500 ಜನ ಸಮಾಜಬಾಂಧವರು ಮತ್ತು ಊರ ಮತ್ತು ಪರವೂರ ಜನರು ಈ ಕಾರ್ಯಕ್ರಮದಲ್ಲಿ ಅನ್ನಪ್ರಸಾದವನ್ನು ಸ್ವೀಕರಿಸಿದರು. ಶ್ರೀ ಡಾ। ಎನ್. ಟಿ. ಅಂಚನ್, ಸುದರ್ಶನ ರಾವ್ ಇನ್ನ, ಉಲ್ಲಾಸರಾವ್, ಜನಾರ್ಧನರಾವ್ ನಂದಿಕೂರು, ಲಕ್ಷ್ಮೀಕಾಂತರಾವ್ ಇನ್ನ ಇವರು ಚಂಡಿಕಾ ಹೋಮದ ಪ್ರಾಯೋಜಕತ್ವವನ್ನು ವಹಿಸಿದರು.

ಮಧ್ಯಾಹ್ನ 3.00 ಗಂಟೆಗೆ ತಡಂಬೈಲು ಮಹಿಳಾ ಯಕ್ಷಗಾನ ಸಂಘದಿಂದ 'ಭೀಷ್ಮ ವಿಜಯ' ಎಂಬ ಯಕ್ಷಗಾನ ತಾಳಮದ್ದಳೆ ನಡೆಯಿತು. ಅಲ್ಲದೆ ಸಂಜೆ 5.00 ಗಂಟೆಯಿಂದ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮವು ಜರಗಿತು. ತಾರೀಕು 10–10–2018 ರಿಂದ 18–10–2018 ರವರೆಗೆ ಶ್ರೀ ಪ್ರಸನ್ನ ಪಾರ್ವತಿ ದೇವಿಯ ಸನ್ನಿಧಾನದಲ್ಲಿ ರಾತ್ರಿ 7.00 ಗಂಟೆಗೆ ಪ್ರತಿದಿನ ನಡೆದ ವಿಶೇಷ ದುರ್ಗಾಪೂಜಾ ಕಾರ್ಯಕ್ರಮದಲ್ಲಿ ಊರ ಮತ್ತು ಪರವೂರಿನ ಭಕ್ತರು ಭಾಗವಹಿಸಿದ್ದರು.

ಅಭಿವೃದ್ಧಿ ಕಾರ್ಯಕ್ರಮಗಳು : ಶ್ರೀ ಕ್ಷೇತ್ರದ ಹೊರಗಿನ ಪ್ರಾಂಗಾಣಕ್ಕೆ ಪಾದೆಕಲ್ಲಿನ ಗ್ರಾನೈಟ್ ಅಳವಡಿಸುವ ಕೆಲಸವು ಪೂರ್ತಿ ಆಗಿರುತ್ತದೆ. ಅಲ್ಲದೆ ಕಲ್ಯಾಣ ಮಂಟಪಕ್ಕೆ ಬೇಕಾದ ಸುಮಾರು 1.25 ಲಕ್ಷದ ಪಾತ್ರೆ, ಕುರ್ಚಿಗಳನ್ನು ಹಾಕಲಾಗಿದೆ ಎಂದು ಟ್ರಸ್ಟಿನ ಅಧ್ಯಕ್ಷರಾದ ಶ್ರೀ ರಘುವೀರರಾವ್, ಕಾರ್ಯದರ್ಶಿ ಶ್ರೀನಿವಾಸಶರ್ಮ, ಶ್ರೀ ಪಿ.ಡಿ ಶೇಖರ ರಾವ್, ಶ್ರೀ ಜಗದಾಭಿರಾಮ ಸ್ವಾಮಿ, ಶ್ರೀ ದಿವಾಕರರಾವ್, ಶ್ರೀ ನಯನಾಭಿರಾಮ ಸ್ವಾಮಿ, ಶ್ರೀ ನರೇಂದ್ರಸ್ವಾಮಿ, ಶ್ರೀ ರಾಜ ಶೇಖರ ರಾವ್, ಶ್ರೀ ಕೃಷ್ಣರಾಜರಾವ್ ಮುದರಂಗಡಿ ಇವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

## ಮಠದಬೆಟ್ಟು ರಾಜರಾಜೇಶ್ವರೀ ದೇವಸ್ಥಾನದಲ್ಲಿ ನವರಾತ್ರಿ, ನೂತನ ಸಭಾಂಗಣಕ್ಕೆ ಶಿಲಾನ್ಯಾಸ



ಪುತ್ತೂರು ತಾಲೂಕಿನ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ನವರಾತ್ರಿ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಪ್ರತೀದಿನವೂ ವಿಶೇಷಪೂಜೆ, ದುರ್ಗಾನಮಸ್ಕಾರ ಹಾಗೂ ಚಂಡಿಕಾಯಾಗವನ್ನು ನಡೆಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಭಾದ ಭಜನಾಮಂಡಲಿಯ ವತಿಯಿಂದ ಒಂದು ದಿನದ ಭಜನಾ ಸೇವೆಯು ನೆರವೇರಿತು. ಹಾಗೆಯೆ ಪರಿಸರದ ಹಲವಾರು ಭಜನಾ ಮಂಡಳಿಗಳು ಭಜನಾ ಸೇವೆಯನ್ನು ಸಲ್ಲಿಸಿದರು. ಪ್ರತೀದಿನವೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ತಾ 14–10–2018 ರಂದು ದೇವಸ್ಥಾನದ ವಠಾರದಲ್ಲಿ ನೂತನ ಸಭಾಂಗಣವನ್ನು ನಿರ್ಮಿಸಲು ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ದಾರ್ಮಿಕ ದತ್ತಿ ಇಲಾಖೆಯ ಸದಸ್ಯರಾದ ಶ್ರೀ ಎನ್. ಕೆ. ಜಗನ್ನಿವಾಸರಾವ್ ಹಾಗೂ ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಡಾ। ವೈ ಸುದರ್ಶನ್ ರಾವ್ ಆಗಮಿಸಿದ್ದರು. ನವರಾತ್ರಿಯ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣರಾದ ಸಮಾಜಬಾಂಧವರಿಗೆ ದೇವಸ್ಥಾನದ ಮುಖ್ಯಸ್ಥರಾದ ಶ್ರೀ ನಾಗೇಶ ಶರ್ಮರು ಧನ್ಯವಾದಗಳನ್ನು ಅರ್ಪಿಸಿದ್ದಾರೆ.

## ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾ ವಾರ್ಷಿಕ ಮಹಾಸಭೆ, ಜಿಲ್ಲಾ ಸಮಾವೇಶ



ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶಗಳು ಇತ್ತೀಚೆಗೆ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯದ ಸಭಾಂಗಣದಲ್ಲಿ ನಡೆದುವು. ಸಭಾದ ಅಧ್ಯಕ್ಷರಾದ ಶ್ರೀ ಸುಕುಮಾರ ಆಲಂಪಾಡಿಯವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಯಲ್ಲಿ ಕಾರ್ಯದರ್ಶಿ ಶ್ರೀ ವಸಂತರಾಜ ಎ.ಪಿ. ಮತ್ತು ಮಹಿಳಾ ಘಟಕದ ಶ್ರೀಮತಿ ಸುಮಂಗಲಾ ಮನೋಹರ್ ಇವರು ವರದಿಗಳನ್ನು ಮಂಡಿಸಿದರು. ಶ್ರೀ ಮನೋಹರ್ ಮತ್ತು ಮಹಿಳಾ ಘಟಕದ ಕೋಶಾಧಿಕಾರಿ ಶ್ರೀಮತಿ ಪ್ರಭಾ ರಮೇಶ್ ಇವರು ಲೆಕ್ಕಪತ್ರಗಳನ್ನು ಮಂಡಿಸಿದರು. ಶ್ರೀಮತಿ ಮಾಲತೀ ಜಗದೀಶ್ ಸ್ವಾಗತಿಸಿ, ಶ್ರೀಮತಿ ವಿಜಯಲಕ್ಷ್ಮಿ ಶ್ಯಾನುಭೋಗ್ ವಂದಿಸಿದರು. ಸಮಾಜ ಬಾಂಧವರು ನಡೆಸಿಕೊಟ್ಟ ಸಂಗೀತ, ನೃತ್ಯ, ಅಭಿನಯ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನರಂಜಿಸಿದವು.


ಅಪರಾಹ್ನ ನಡೆದ ಜಿಲ್ಲಾ ಸಮಾವೇಶವನ್ನು ಚೆರುಗೋಳಿ ಶ್ರೀ ಸೋಮನಾಥ ದೇವಸ್ಥಾನದ ಮೊಕ್ತೇಸರರಾದ ಉಡುಪಿಯ ಡಾ। ಸಿ.ಜಿ. ರಮೇಶ್ ರಾವ್ ಉದ್ಘಾಟಿಸಿದರು. ಉಡುಪಿಯ ಡಾ। ಶೋಭಾ ರಮೇಶ ರಾವ್ ಸಭಾದ ವಾರ್ಷಿಕ ಪತ್ರಿಕೆಯಾದ 'ಶಿವಗಂಗಾ'ವನ್ನು ಬಿಡುಗಡೆ ಗೊಳಿಸಿದರು. ಕನ್ಯಾನದ ನಿವೃತ್ತ ಪ್ರಿನ್ಸಿಪಾಲ್ ಶ್ರೀ ಎಂ.ಬಾಲಕೃಷ್ಣರಾವ್ ಸಮಾರೋಪ ಭಾಷಣ ಮಾಡಿದರು. ಆ ಬಳಿಕ ಶ್ರೀ ಕೆ.ಜಿ.ಶ್ಯಾನುಭೋಗ್ ಕೂಡ್ಲು (ಸಮಾಜರತ್ನ), ಶ್ರೀ ಚಂದ್ರಶೇಖರ ಮರ್ದಂಬೈಲು (ಸಮಾಜ ಸೇವೆ), ಶ್ರೀಮತಿ ಮಾಲತೀ ಜಗತೀಶ್ ಕೂಡ್ಲು(ಸಮಾಜ ಕೀರ್ತಿ), ಶ್ರೀ ಅಭಿಷೇಕ್ ಬಳಕ್ಕಿಲ (ಕಲಾಪ್ರತಿಭೆ), ಕು। ಶ್ರಾವ್ಯಶ್ರೀ ಉಬರಳೆ (ಲಲಿತಕಲೆ), ಶ್ರೀ ಭೋಜರಾಜ ಕಾಸರಗೊಡು (ಚಿತ್ರಕಲೆ ಮತ್ತು ಲಲಿತಕಲೆ), ಶ್ರೀ ಹರಿಪ್ರಸಾದ್ ಎಂ.ಸಿ. ಮಧೂರು (ಕ್ರೀಡಾರತ್ನ) ಮತ್ತು ಶ್ರೀ ಸುಬ್ರಹ್ಮಣ್ಯ ರಾವ್ ಬೇವಿಂಜೆ (ಯುವಶ್ರೀ) ಇವರಿಗೆ ಪ್ರಾಯೋಜಿತ ಪ್ರಶಸ್ತಿಗಳನ್ನು ವಿತರಿಸಲಾಯಿತು. ಜೊತೆಗೆ ಡಾ। ಮೃದುಲಾ ಕೆ.ಎಸ್. (ಎಂ.ಡಿ.ತೃತೀಯ ರ್‍ಯಾಂಕ್ ವಿಜೇತೆ), ಕು। ಅಪೂರ್ವಾ ಶ್ಯಾನುಭೋಗ್ ಕೂಡ್ಲು(ಎಂ.ಬಿ.ಎ. ಚಿನ್ನದ ಪದಕ ವಿಜೇತೆ) ಡಾ। ತೃಪ್ತಿ ಜಗದೀಶ್ ('ಬೆಸ್ಟ್ ಡೆಂಟಲ್ ಕ್ಲಿನಿಕ್ 2017' ಒಮಾನ್ ಸರಕಾರದ ಪ್ರಶಸ್ತಿ ವಿಜೇತೆ) ಮತ್ತು ಡಾ। ಶ್ರೇಯಸ್ವಿ ಸತ್ಯನಾಥ್ (ರಾಜೀವ ಗಾಂಧಿ ವಿಶ್ವವಿದ್ಯಾಲಯ ಅನುದಾನಿತ ಪ್ರಾಜೆಕ್ಟ್ ಮುಖ್ಯಸ್ಥೆ) ಇವರನ್ನು ಅಭಿನಂದಿಸಿ ಗೌರವಿಸಲಾಯಿತು. ಸಮಾಜದ ಹಿರಿಯ ಚೇತನಗಳಾದ ಶ್ರೀ ಈಶ್ವರಯ್ಯ ಅನಂತಪುರ, ಶ್ರೀ ಮಿತ್ತೊಟ್ಟಿಸುಬ್ಬರಾವ್ ಅಡೂರು, ಶ್ರೀಮತಿ ಯಶೋದಾ ಸುಬ್ರಾಯ ರಾವ್ ಉಬರಳೆ ಮತ್ತು ಶ್ರೀಮತಿ ಪದ್ಮಾವತಿ ಶ್ಯಾನುಭೋಗ್ ಕೂಡ್ಲು ಇವರನ್ನು ಆದರಿಸಲಾಯಿತು.

ಎಸ್ಸೆಸ್ಸೆಲ್ಸಿ, ಪಿಯುಸಿ, ಪ್ಲಸ್ ಟು ಪರೀಕ್ಷೆಗಳಲ್ಲಿ ಉನ್ನತಾಂಕಗಳನ್ನು ಗಳಿಸಿ ತೇರ್ಗಡೆಯಾದ ಕು। ಅಂಜಲಿ ಸಿ, ಶ್ರೀ ರಾಹುಲ್ ಎಸ್.ರಾವ್, ಶ್ರೀ ಸಚಿನ್ ಶ್ಯಾನುಭೋಗ್ ಕೆ., ಶ್ರೀ ಆತ್ಮೀಯ ಕೃಷ್ಣ ಎಂ., ಶ್ರೀ ಅಭಿಷೇಕ್ ಆರ್.ರಾವ್, ಶ್ರೀ ಆಕಾಶ್ ಕೆ.ಪಿ. ಮತ್ತು ಶ್ರೀ ಸೃಜನ್ ಕೆ. ಇವರಿಗೆ ಪ್ರತಿಭಾ ಪುರಸ್ಕಾರ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ವಿತರಿಸಲಾಯಿತು. ವಿವಿಧ ಸಾಂಸ್ಕೃತಿಕ, ಸಾಹಿತ್ಯಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಗಳನ್ನು ನೀಡಲಾಯಿತು. ಡಾ। ಕೆ.ಕೆ. ಶ್ಯಾನುಭೋಗ್ ಸ್ವಾಗತಿಸಿ, ಕಾರ್ಯದರ್ಶಿ ಶ್ರೀ ವಸಂತರಾಜ ವಿ.ಪಿ. ವಂದಿಸಿದರು. ಶ್ರೀ ರಾಂ ಎಲ್ಲಂಗಳ ಮತ್ತು ಶ್ರೀ ಮನೋಹರ ಎ. ಕಾರ್ಯಕ್ರಮಗಳನ್ನು ನಿರ್ವಹಿಸಿದರು.



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ನಿಧನ

### ಶ್ರೀ ಕೆ. ಹರೀಶ್ ರಾವ್



ಪ್ರಸಿದ್ಧ ಕೇದಗೆ ಮನೆತನದ ದಿ। ವಗ್ಗ ಜನಕರಾಯರ ಪುತ್ರ ಧರ್ಮಸ್ಥಳ ನಿವಾಸಿ ಶ್ರೀ ಕೆ. ಹರೀಶ್ ರಾವ್ (53 ವರ್ಷ) ರವರು ತಾ.18.10.2018ರಂದು ನಿಧನರಾದರು. ದಿ। ಹರೀಶ್‌ರಾವ್ ರವರು ಹಲವಾರು ವರ್ಷಗಳಿಂದ ಧರ್ಮಸ್ಥಳ ಡಾ। ವೀರೇಂದ್ರ ಹೆಗ್ಗಡೆಯವರ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿದ್ದು ಕಳೆದ 4 ವರ್ಷಗಳಿಂದ ದೇವಳದ ಪ್ರಬಂಧಕರಾಗಿ ಕರ್ತವ್ಯ ದಲ್ಲಿದ್ದರು. ಬಹುಮುಖ ಪ್ರತಿಭೆಯು ದಿವಂಗತರು ಉತ್ತಮ ನಾಟಕಕಾರ ರಾಗಿದ್ದರು ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿದ್ದರು.

ಬೆಳ್ತಂಗಡಿ ಸ್ಥಾನಿಕ ಸಭಾದ ಸಕ್ರಿಯ ಕಾರ್ಯಕರ್ತರಾಗಿದ್ದ ಹರೀಶ್ ರಾವ್ ಸೌಮ್ಯ ಸ್ವಭಾವದ ತಮ್ಮ ನಡೆಯಿಂದ ಎಲ್ಲರ ಪ್ರೀತಿ ಪಾತ್ರರಾಗಿದ್ದರು. ದಿವಂಗತರು ಪತ್ನಿ ಮಮತಾರಾವ್ (ಧರ್ಮಸ್ಥಳ ಸಂಸ್ಥೆಯಲ್ಲಿ ಹೆಚ್.ಆರ್ ಡೈರೆಕ್ಟರ್ ) ಹಾಗೂ ಪುತ್ರಿ ಶರಣ್ಯರಾವ್ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**** ****

### ಕೊಕ್ರಾಡಿ ಅನಂತರಾಮ ರಾವ್



ಪ್ರಸನ್ನ ಐ.ಟಿ.ಐ ಕಾಲೇಜು ಉಜಿರೆ ಇದರ ಪ್ರಾಂಶುಪಾಲರಾಗಿದ್ದ ಕೊಕ್ರಾಡಿ ಅನಂತರಾಮ ರಾವ್ ಇವರು ತಾ27.10.2018ರಂದು ನಿಧನ ಹೊಂದಿದರು

**** ****

### ಶ್ರೀಮತಿ ಇಂದಿರಾ ಕೆ.ಜಿ

ಕಂಬದಕೋಣೆ ನಿವಾಸಿ ಶ್ರೀಮತಿ ಇಂದಿರಾ ಕೆ.ಜಿ. ಯವರು ತಾ.19.10.2018 ರಂದು ನಿಧನ ಹೊಂದಿದರು

**** ****

### ಶ್ರೀಮತಿ ಯಶೋದ ಆರ್. ರಾವ್

ದಿ। ಬೆಳ್ಮಣ್ಣು ಎನ್ ರಾಜಶೇಖರ ರಾವ್ ರವರ ಪತ್ನಿ ಶ್ರೀಮತಿ ಯಶೊದ ಆರ್. ರಾವ್‌ರವರು ತಾ.26.10.2018 ರಂದು ನಿಧನ ಹೊಂದಿದರು.

## ಅಭಿನಂದನೆಗಳು

### ಕು ಸಮನ್ವಿತಾ ಜಿ. ಭಟ್



ಕರ್ನಾಟಕ ಸರಕಾರದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 2017–18 ನೇ ಸಾಲಿನ ಭರತನಾಟ್ಯ ಪರೀಕ್ಷೆಯ ಜೂನಿಯರ್ ವಿಭಾಗದಲ್ಲಿ ಕು.ಸಮನ್ವಿತ ಜಿ. ಭಟ್ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಪರೀಕ್ಷೆಯನ್ನು 2017 ರಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಇವರು ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್ (ರಿ) ಇದರ ನೃತ್ಯ ಗುರುಗಳಾದ ವಿದ್ವಾನ್ ಯು. ಕೆ. ಪ್ರವೀಣ್ ಮತ್ತು ಸಂಗೀತ ಗುರುಗಳಾದ ಶ್ರೀಮತಿ ಉಷಾ ಪ್ರವೀಣ್ ಇವರ ಶಿಷ್ಯೆ ಹಾಗೂ ಶ್ರೀ ಗಣೇಶ್ ಭಟ್ ಎಚ್. ಮತ್ತು ಶ್ರೀಮತಿ ಶ್ರೀಲತಾ ಜಿ.ಭಟ್ ಇವರ ಪುತ್ರಿ (ದಿ। ವೇದಮೂರ್ತಿ ಯಚ್. ನಾರಾಯಣ ಭಟ್ ಮತ್ತು ದಿ। ಶ್ರೀಮತಿ ಜಾನಕಿ ಹಾಗೂ ದಿ। ನಂದಳಿಕೆ ಶಿವರಾವ್ ಮತ್ತು ಶ್ರೀಮತಿ ಕೃಷ್ಣವೇಣಿ ಇವರ ಪೌತ್ರಿ).

### ಸಮೃದ್ಧಿ ರಾವ್




2017–18ನೇ ಸಾಲಿನ ಭರತನಾಟ್ಯ ಜೂನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಎಲ್ಲೂರಿನ ಶ್ರೀಮತಿ ಸೌಮ್ಯಲತಾ ಹಾಗೂ ಶ್ರೀ ರವಿರಾಜ್ ವೈ.ಆರ್. ಇವರ ಪುತ್ರಿ ಸಮೃದ್ಧಿ ರಾವ್ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಕದ್ರಿ ವಿದ್ವಾನ್ ಯು.ಕೆ ಪ್ರವೀಣ್ ಮತ್ತು ಶ್ರೀಮತಿ ಉಷಾ ಪ್ರವೀಣ್ ಇವರ ಶಿಷ್ಯೆ.

### ಅಂತರಾಷ್ಟ್ರೀಯ ಮಾನ್ಯತೆ

ಬೆಳುವಾಯಿಯ ಯಕ್ಷದೇವ ಮಿತ್ರ ಮಂಡಳಿಗೆ ಅಮೇರಿಕಾದ ಅರಿಜೋನಾ ರಾಜ್ಯವು ಅಧಿಕೃತ ಸಂಸ್ಥೆಯೆಂದು ಗುರುತಿಸಿ ಮಾನ್ಯತಾ ಪತ್ರವನ್ನು ನೀಡಿದೆ. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ದೇವಾನಂದ ಭಟ್ಟ್ ರವರ ನೇತೃತ್ವದಲ್ಲಿ ಯಕ್ಷಗಾನತಂಡವು ಅಮೇರಿಕಾಕ್ಕೆ ತೆರಳಿ ವಿವಿಧ ರಾಜ್ಯಗಳಲ್ಲಿ ಸಂಚರಿಸಿ ಹಲವಾರು ಪ್ರದರ್ಶನಗಳನ್ನು ನೀಡಿದ ಸಂದರ್ಭದಲ್ಲಿ ಈ ಮಾನ್ಯತಾ ಪತ್ರ ಲಭಿಸಿದೆ. ಅಂತರಾಷ್ಟ್ರೀಯ ಗೌರವಕ್ಕೆ ಪಾತ್ರವಾದ ಸಂಸ್ಥೆಗೂ ಅದರ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್‌ರವರಿಗೂ ಹಾರ್ದಿಕ ಅಭಿನಂದನೆಗಳು.

### ಚಿನ್ನದ ಪದಕದ ಸಾಧನೆ



ಕೊಕ್ಕರ್ಣೆ ಸಾಸ್ತಾವು ನಿವಾಸಿ ಶ್ರೀ ಶಿವರಾಮ ರಾವ್ ಮತ್ತು ಶಕುಂತಲಾ ದಂಪತಿಗಳ ಪುತ್ರ ಡಾ। ಶ್ರೀಶ ರಾವ್ ಇವರು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು, ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿಯನ್ನು ಚಿನ್ನದ ಪದಕದೊಂದಿಗೆ ಗಳಿಸಿದ್ದಾರೆ. ಯುವ ಜನಾಂಗವು ಬಿಳಿಕಾಲರಿನ ಉದ್ಯೋಗಗಳಿಗೆ ಜೋತುಬೀಳುತ್ತಿರುವ ಈ ಕಾಲಘಟ್ಟದಲ್ಲಿ ಕೃಷಿ ಸಂಬಂಧಿತ ವಿಜ್ಞಾನದಲ್ಲಿ ಆಸಕ್ತಿ ತೋರಿಸಿ ಕಲಿತು ಉನ್ನತ ಸಾಧನೆಗೈದಿರುವ ಯುವ ಪ್ರತಿಭೆಗೆ ಅಭಿನಂದನೆಗಳು.

## ನವರಾತ್ರಿ ಹಬ್ಬ

### ಮುಂಡ್ಕೂರು ದೇವಸ್ಥಾನ

ಕಾರ್ಕಳ ತಾಲೂಕಿನ ಮುಂಡ್ಕೂರು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಹಲವಾರು ಕಾರ್ಯಕ್ರಮಗಳು ಜರಗಿದವು. ವಿಶೇಷಪೂಜೆಗಳು, ದುರ್ಗಾನಮಸ್ಕಾರ ಹಾಗೂ ತಾ 18–10–2018ರಂದು ಚಂಡಿಕಾಯಾಗ ಸಂಪನ್ನಗೊಂಡವು. ದೇವಸ್ಥಾನದ ಮೊಕ್ತೇಸರರಾದ ಶ್ರೀ ಬಿ.ವಿ.ರಾವ್ ರವರ ಉಸ್ತುವಾರಿಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳು ನಡೆದವು. ಅನ್ನ ಸಂತರ್ಪಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೂ ನೆರವೇರಿದವು.

### ಹೆಬ್ರೂರು ಮಠ

ಹೆಬ್ರೂರು ಕೋದಂಡಾಶ್ರಮ ಮಠದ ಶ್ರೀ ಕಾಮಾಕ್ಷಿ ಶಾರದಾ ಸನ್ನಿಧಿಯಲ್ಲಿ ನವರಾತ್ರಿಯ ಪ್ರತಿದಿನವೂ ಚಂಡಿಕಾ ಹೋಮವು ನೆರವೇರಿತು. ತಾ 14.10.2018 ರಂದು ವಿಶೇಷವಾಗಿ ಲಲಿತಾ ಹೋಮವೂ ನೆರವೇರಿತು. ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳವರು ಉಪಸ್ಥಿತರಿದ್ದು ಭಕ್ತರಿಗೆ ಫಲಮಂತ್ರಾಕ್ಷತೆಯನ್ನು ಅನುಗ್ರಹಿಸಿದರು. ನವರಾತ್ರಿಯ ಅಂಗವಾಗಿ ಪ್ರತೀ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ತಾ14.10.2018ರಂದು ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಕುಂಜಿಬೆಟ್ಟು ಇವರಿಂದ ಶಿವಪಂಚಾಕ್ಷರಿ(ಶ್ವೇತಕುಮಾರ ಚರಿತ್ರೆ)ಎಂಬ ಪೌರಾಣಿಕ ಕಥಾನಕದ ಯಕ್ಷಗಾನ ಪ್ರದರ್ಶನ ನೆರವೇರಿತು. ಮಠದ ಮೆನೇಜರ್ ಶ್ರೀ ಸತ್ಯನಾರಾಯಣ ಹಾಗೂ ಗುರುಗಳ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ರಾವ್ ಈ ಎಲ್ಲಾ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

### ಶುಭ ಜನನ

ಶ್ರೀ ಚೈತನ್ಯ ರಾವ್ ಕೆ. ಮತ್ತು ಶ್ರೀಮತಿ ರಮ್ಯ (ಕೊಕ್ರಾಡಿ ಸುರೇಶ್ ರಾವ್ ಕುತ್ಪಾಡಿ ಮತ್ತು ಶ್ರೀಮತಿ ನಾಗವಲ್ಲಿ ಅವರ ಪುತ್ರ) ರವರಿಗೆ ದಿನಾಂಕ 12–10–2018ರಂದು ಹೆಣ್ಣು ಮಗುವಿನ ಜನನ.


ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

SAMPATH KUMAR Mobile : 9741508881
**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

Buying and selling shares as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ನಾಡ ಹಬ್ಬ' ಆಚರಣೆ




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.21.10.2018ರ ರವಿವಾರದಂದು "ನಾಡಹಬ್ಬ" ದಸರಾವನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಶ್ರೀ ದುರ್ಗಾಸಹಸ್ರನಾಮ, ಶ್ರೀ ಶಂಕರ ಅಷ್ಟೋತ್ತರ ಸಹಿತ ವಿವಿಧ ಪಾರಾಯಣ ಗಳೊಂದಿಗೆ ಕಾರ್ಯಕ್ರಮ ಆರಂಭ ಗೊಂಡಿತು. ಮುಂದೆ ಛದ್ಮವೇಷ, ಚಿತ್ರ ಬಿಡಿಸುವ ಮತ್ತು ಹುಲಿ ಕುಣಿತ ಸ್ಪರ್ಧೆಗಳು ಹಿರಿಯರ ಹಾಗೂ ಕಿರಿಯರ ವಿಭಾಗದಲ್ಲಿ ನಡೆದವು. ಕೂಡ್ಲು ವಿಷ್ಣುಶ್ಯಾನುಭೋಗರಿಂದ ಸ್ಥಾಪಿಸಲ್ಪಟ್ಟ ವಿದ್ಯಾನಿಧಿಗಳಿಂದ ವಿದ್ಯಾರ್ಥಿ ವೇತನಗಳನ್ನು ವಿತರಿಸಲಾಯಿತು. ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ.ಪಿ.ಕೃಷ್ಣ ಕಾರ್ಯಕ್ರಮ ಸಂಯೋಜಿಸಿದರು. ದಿ| ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳ್ಯಾ ಇವರಿಂದ ಸುಮಾರು 35 ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಶ್ರೀ ಸದಾಶಿವ ಶಾಸ್ತ್ರಿಯವರು ನೀಡಿ ಗೌರವಿಸಿದರು.

ಭೋಜನದ ಬಳಿ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿ ವತಿಯಿಂದ "ಬಹ್ಮಕಪಾಲ" ಯಕ್ಷಗಾನವನ್ನು ಶ್ರೀ ಸಂಜಯ ಕುಮಾರ್ ಪಲಿಮಾರ್ ರವರ ನಿರ್ದೇಶನದಲ್ಲಿ ಪ್ರದರ್ಶಿಸಲಾಯಿತು. ಸ್ಪರ್ಧೆಗಳ ತೀರ್ಪುಗಾರರಾಗಿ ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀ ರಘುವೀರ ಪೆರ್ಡೂರ್, ಶ್ರೀ ನಾಗರಾಜ ಶರ್ಮ ಸಹಕರಿಸಿದರು. ಯುವ ವೇದಿಕೆಯ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ, ಮಹಿಳಾ ವೇದಿಕೆಯ ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಕುಸುಮಾ ನವೀನ್ ಕುಮಾರ್, ಡಾ ಜಯಲಕ್ಷ್ಮೀ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಧನ್ಯವಾದ ಸಮರ್ಪಣೆ, ಬಹುಮಾನ ವಿತರಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

## ಶ್ರೀ ಶಾರದಾ ಮಂಟಪಕ್ಕೆ ಸ್ಟೀಲ್ ಲೋಟಗಳ ಕೊಡುಗೆ

ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ನಿರ್ದೇಶಕರಾಗಿರುವ ಶ್ರೀ ಬೆಳ್ಮಣ್ಣು ಹರಿಶ್ಚಂದ್ರ ರಾವ್ ಹಾಗೂ ಶ್ರೀಮತಿ ಸರೋಜಿನಿ ದಂಪತಿಗಳು ಶ್ರೀ ಶಾರದಾ ಮಂಟಪಕ್ಕೆ ಉಪಯೋಗವಾಗುವಂತೆ 1,000 ಸ್ಟೀಲ್ ಲೋಟಗಳನ್ನು (ಸುಮಾರು 20,000/– ಬೆಲೆಯ) ದಾನವಾಗಿ ನೀಡಿದ್ದಾರೆ. ಶ್ರೀ ಶಾರದಾ ಮಂಟಪದ ಪರಿಸರವನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ಆಡಳಿತ ಮಂಡಳಿಯ ಚಿಂತನೆಗೆ ಸಹಕಾರವಾಗುವ ಶ್ರೀಯುತ ಹರಿಶ್ಚಂದ್ರ ರಾವ್ ದಂಪತಿಗಳ ಈ ದೇಣಿಗೆಯನ್ನು ನವರಾತ್ರಿಯ ಶುಭ ಸಂದರ್ಭದಲ್ಲಿ ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗಿದೆ.

## ವಿದ್ಯಾರ್ಥಿ ವೇತನ ನಿಧಿಗೆ ದೇಣಿಗೆ

ಮೈಸೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಚಿಟ್ಪಾಡಿ ಅಶೋಕ್ ರಾವ್ ಮತ್ತು ಶ್ರೀಮತಿ ಆಶಾ ಅಶೋಕ್ ರಾವ್ ದಂಪತಿಗಳು ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ವಿದ್ಯಾರ್ಥಿ ವೇತನ ನಿಧಿಗೆ ರೂ. 4,000/– ವನ್ನು ದೇಣಿಗೆಯಾಗಿ ನೀಡಿರುತ್ತಾರೆ. ಅವರ ಈ ದೇಣಿಗೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗಿದೆ.

## ಪಾಕೇಟ್ ಕ್ಯಾಲೆಂಡರ್ 2019

| | | | | | ಜನವರಿ–31 ಅಕ್ಟೋಬರ್–31 | ಮೇ–31 | ಆಗಸ್ಟ್–31 | ಫೆಬ್ರವರಿ–28 ಮಾರ್ಚ್–31 ನವೆಂಬರ್–30 | ಜೂನ್–30 | ಸೆಪ್ಟೆಂಬರ್–30 ಡಿಸೆಂಬರ್–31 | ಏಪ್ರಿಲ್–30 ಜುಲೈ–31 |
|---|---|---|---|---|---|---|---|---|---|---|---|
| 1 | 8 | 15 | 22 | 29 | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ |
| 2 | 9 | 16 | 23 | 30 | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ |
| 3 | 10 | 17 | 24 | 31 | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ |
| 4 | 11 | 18 | 25 | ★ | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು |
| 5 | 12 | 19 | 26 | ★ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ |
| 6 | 13 | 20 | 27 | ★ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| 7 | 14 | 21 | 28 | ★ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ |

01-01-2020 : ಬುಧವಾರ — ರಚನೆ : ಮ.ಮ. ಹೆಬ್ಬಾರ್, ಬೇಳಂಜೆ

## ಪ್ರತಿಭಾ ಪುರಸ್ಕಾರ




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಿನಾಂಕ 21–10–2018ರಂದು ದಸರಾ ಪ್ರಯುಕ್ತ ಜರಗಿದ ನಾಡಹಬ್ಬದಂದು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ ವಿಶಿಷ್ಠ ಶ್ರೇಣಿಯಲ್ಲಿ ತೇರ್ಗಡೆಯಾದ ನಮ್ಮ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ಸ್ಥಾಪಕರಾದ ಶ್ರೀ ಕೆ. ಸದಾಶಿವಶಾಸ್ತ್ರಿ ಮತ್ತು ಶ್ರೀಮತಿ ಕೆ. ಸೌಭದ್ರಾ ಶಾಸ್ತ್ರಿ ದಂಪತಿಗಳು ಫಲ, ಸ್ಮರಣಿಕೆ, ಗೌರವ ಧನ ನೀಡಿ ಅಭಿನಂದಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು.

## ನೂತನ ವಿಳಾಸ

**ಶ್ರೀ ನಾಗರಾಜ ಶರ್ಮ ಕೆ.,** ಚಾರ್ಟರ್ಡ್ ಎಕೌಂಟೆಂಟ್

''ಶರ್ಮ'', ನಾಗಬನ ಹತ್ತಿರ, ಮುಂದನ ಕ್ರಾಸ್, ಕದ್ರಿ ಕಂಬ್ಳ ರಸ್ತೆ, ಬೆಜೈ, ಮಂಗಳೂರು, ದ.ಕ.–576004

★★★★ ★★★★

**ಶ್ರೀ ಪಿ. ಸಚ್ಚಿದಾನಂದ,**

6ನೇ ಕ್ರಾಸ್ ರಸ್ತೆ, ''ದಿವ್ಯ ಸದನ'', ಕಾಪಿಕಾಡ್ ರಸ್ತೆ, ಬಿಜೈ, ಮಂಗಳೂರು


## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4–30ರಿಂದ

**ತಾ.26-11-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.08-12-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.27-11-2018 ಮತ್ತು ತಾ.12-12-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


## ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 16–11–2018 | ವೃಶ್ಚಿಕ ಸಂಕ್ರಮಣ, ಗುರು ಅಸ್ತ |
| 19–11–2018 | ಸರ್ವೈಕಾದಶಿ |
| 20–11–2018 | ಉತ್ಥಾನ ದ್ವಾದಶಿ, ತುಳಸಿಪೂಜಾ ಉಡುಪಿ ಲಕ್ಷದೀಪಾರಂಭ |
| 23–11–2018 | ಹುಣ್ಣಿಮೆ ಉಡುಪಿ ಲಕ್ಷದೀಪ ಸಮಾಪ್ತಿ |
| 24–11–2018 | ಕಾರ್ತಿಕ ಮಾಸ ಕೃಷ್ಣಾಪಕ್ಷಾರಂಭ |
| 26–11–2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.15 |
| 03–12–2018 | ಸರ್ವೈಕಾದಶಿ ಕೊನೆಯ ಕಾರ್ತೀಕ ಸೋಮವಾರ |
| 07–12–2018 | ಅಮಾವಾಸ್ಯೆ |
| 08–12–2018 | ಹೇಮಂತ ಋತು, ಮಾರ್ಗಶಿರ ಮಾಸ ಶುಕ್ಲಪಕ್ಷಾರಂಭ ಗುರು ಉದಯ |
| 13–12–2018 | ಸುಬ್ರಹ್ಮಣ್ಯ ಷಷ್ಠಿ |
| 16–12–2018 | ಧನು ಸಂಕ್ರಮಣ |
| 18–12–2018 | ಸ್ಮಾರ್ತೈಕಾದಶಿ |
| 19–12–2018 | ಭಾಗವತ–ವೈಷ್ಣವೈಕಾದಶಿ |


## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

## ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

# ನವರಾತ್ರಿಯ ಆಲ್ಬಂ





ಶ್ರೀ ಮ.ನಾ.ಹೆಬ್ಬಾರ್‌ರವರಿಂದ ಹರಿಕಥೆ,
ಹಾರ್ಮೋನಿಯಂ-ಶ್ರೀಮತಿ ಯಶೋಧಾ ಕೋಲ್ವೆ, ತಬಲಾ-ಶ್ರೀ ಯಾಜ್ಞವಲ್ಕ್ಯ



ಭಕ್ತಿಗೀತೆ : ಕುಮಾರಿ ವೈ. ಮಾನಸ ರಾವ್ ಹಾಗೂ ಡಾ| ಶ್ರೀಮತಿ ವಿದ್ಯಾ ಎಸ್.ರಾವ್



ಕುಮಾರಿ ಶ್ರಾವ್ಯ ರವಿಶಂಕರ್‌ರವರಿಂದ ಸುಗಮ ಸಂಗೀತ



ರವಿತೇಜ ಬೆಳ್ಳೆಯವರಿಂದ ವೇಣುವಾದನ



ದಿಶಾ ಪಿ.ರಾವ್‌ರವರಿಂದ ವೀಣಾ ವಾದನ, ಕೀಬೋರ್ಡ್-ಬಿ. ಪ್ರಕಾಶ್ ರಾವ್



ಕು| ಪ್ರೇರಣಾ ರಾವ್‌ರಿಂದ ಭರತನಾಟ್ಯ



ಶ್ರೀ ಪ್ರವೀಣಕುಮಾರ್ ಕುಕ್ಕಿಕಟ್ಟೆಯವರಿಂದ ಯಕ್ಷ ಸಂಗೀತ



ಬ್ರಹ್ಮಾವರ ತಂಡದಿಂದ ಭಜನೆ-ಹಾರ್ಮೋನಿಯಂ ಡಾ| ವೈ. ರವೀಂದ್ರನಾಥ ರಾವ್




ವಿದುಷಿ ಡಾ| ಚೈತ್ರಾರವರಿಂದ ಭರತನಾಟ್ಯ



ಮಹಿಳಾ ನೃತ್ಯ ತಂಡ



ಯಕ್ಷಗಾನ 'ಚಿತ್ರಾಂಗಿ ಕಲ್ಯಾಣ'



ವಿದುಷಿ ಸೌಜನ್ಯಾ ಅಜಯ್ ರಾವ್‌ರಿಂದ ಭರತನಾಟ್ಯ




ಶ್ರೀಶಾರದಾ ಭಜನಾ ಮಂಡಳಿಯವರು ಈ ವರ್ಷದ ನವರಾತ್ರಿಯಂದು ಕಡಿಯಾಳಿ ಮಹಿಷಮರ್ದಿನಿ ದೇವಸ್ಥಾನ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ ಹಾಗೂ ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟಿನಲ್ಲಿ ಭಜನಾ ಕಾರ್ಯಕ್ರಮವನ್ನು ನೀಡಿದರು.



ಹಿರಿಯ ಮಹಿಳೆಯರಿಂದ ಕೋಲಾಟ



ಹೆಮ್ಮಕ್ಕಳ ನೃತ್ಯ

ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

“ಶ್ರೀರಂಗ”, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436

**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

## ವಿಜಯ ದಶಮಿಯಂದು ಯಕ್ಷಗಾನ




ಪ್ರತಿ ವರ್ಷದಂತೆ ವಿಜಯದಶಮಿಯಂದು ಉಡುಪಿ ಕುಂಜಿಬೆಟ್ಟಿನ ''ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು'' ತಂಡದಿಂದ ಯಕ್ಷಗಾನ ಬಯಲಾಟವು ನೆರವೇರಿತು. ತಂಡದ ಬಾಲಕಲಾವಿದರಿಂದ 'ವೀರ ವೃಷಸೇನ' ಹಾಗೂ ಇತರ ಕಲಾವಿದರಿಂದ 'ಚಿತ್ರಾಕ್ಷಿ ಕಲ್ಯಾಣ' ಪ್ರಸಂಗಗಳು ಪ್ರದರ್ಶಿತವಾಯಿತು. ಹಿಮ್ಮೇಳದಲ್ಲಿ ಭಾಗವತರಾದ ಶ್ರೀ ಚಂದ್ರಕಾಂತ ರಾವ್ ಹಾಗೂ ಪ್ರವೀಣ್‌ಕುಮಾರ್ ಸಹಕರಿಸಿದರೆ, ಮದ್ದಳೆ ವಾದನದಲ್ಲಿ ಶ್ರೀ ದೇವದಾಸ್ ಕೂಡ್ಲಿ ಹಾಗೊ ಶ್ರೀ ಪ್ರದೀಪ್ ಭಟ್, ಚೆಂಡೆಯಲ್ಲಿ ಶ್ರೀ ಶಿವಾನಂದ ಕೋಟ ಹಾಗೂ ಶ್ರೀ ಕೃಷ್ಣಮೂರ್ತಿ ಬಗ್ವಾಡಿ ಸಹಕರಿಸಿದರು.

'ವೀರ ವೃಷಸೇನ' ಪ್ರಸಂಗದಲ್ಲಿ ವೃಷಸೇನನಾಗಿ ಕುಮಾರಿ ಶ್ರೀನಿಧಿ, ಸೋಮಪ್ರಭೆಯಾಗಿ ಕುಮಾರಿ ಶ್ರಾವ್ಯ, ಕೃಷ್ಣನಾಗಿ ವಿಘ್ನೇಶ್ ಚೊಕ್ಕಾಡಿ, ಭೀಮನಾಗಿ ಎಂ.ಆದಿತ್ಯರಾವ್ ಚಿಟ್ಪಾಡಿ, ಅರ್ಜುನನಾಗಿ ಟಿ.ಸ್ಕಂದಕುಮಾರ್ ವಿ.ಪಿ.ನಗರ, ಕೌರವನಾಗಿ ಕುಮಾರಿ ವೈಷ್ಣವಿ ಹೆಬ್ಬಾರ್ ಬೈಲಕೆರೆ ಪಾತ್ರ ನಿರ್ವಹಿಸಿದ್ದರು.

ನಂತರ ಪ್ರಾರಂಭಗೊಂಡ 'ರಾಜ ರುದ್ರಕೋಪ'ದಲ್ಲಿ ರಕ್ತಕೇಶಿಯಾಗಿ ವಿಶ್ವನಾಥ ಶ್ಯಾನುಭೋಗ್, ಮಂತ್ರಿಯಾಗಿ ವಿಘ್ನೇಶ್, ನಾರದನಾಗಿ ಶ್ರೀಕಾಂತ ರಾವ್, ಚಂದ್ರಸೇನನಾಗಿ ಕೃಷ್ಣಕುಮಾರ್ ರಾವ್ ಮಟ್ಟು, ಜಯಸೇನನಾಗಿ ಸ್ಕಂದಕುಮಾರ್, ಸತ್ಯಶೀಲೆಯಾಗಿ ಕಾರ್ತಿಕ್ ರಾವ್ ಚೊಕ್ಕಾಡಿ, ಗಂಗೆಯಾಗಿ ಶ್ರಾವ್ಯ ರವಿಶಂಕರ ಬೆಂಗಳೂರು, ವ್ಯಾಸಮುನಿಗಳಾಗಿ ಡಾ| ಸಂತೋಷ ರಾವ್ ಚಿಟ್ಪಾಡಿ, ರಕ್ತಕೇಶಿಯಾಗಿ ವೈ. ವಾಗೀಶ ರಾವ್ ಕಲ್ಮಂಜೆ, ರುದ್ರಕೋಪನಾಗಿ ವ್ಯಾಸರಾವ್ ಕಲ್ಮಂಜೆ ಹಾಗೂ 2ನೇ ರುದ್ರಕೋಪನಾಗಿ ಟಿ.ವಾಗೀಶ ರಾವ್ ನಿಟ್ಟೂರು, ಚಿತ್ರಾಕ್ಷಿಯಾಗಿ ಕುಮಾರಿ ಶ್ರೀನಿಧಿ ಮತ್ತು 2ನೇ ಚಿತ್ರಾಕ್ಷಿಯಾಗಿ ಕಾರ್ತಿಕ್ ಚೊಕ್ಕಾಡಿ, ರಕ್ತಕೇಶಿಯ ಅಜ್ಜಿ ಪಾತ್ರದಲ್ಲಿ ಅಜಿತ್ ರಾವ್ ಬೈಲೂರು ಪಾತ್ರ ನಿರ್ವಹಿಸಿದ್ದರು.

ಸಂಜೆ 5-30ಕ್ಕೆ ಪ್ರಾರಂಭಗೊಂಡ ಬಯಲಾಟವು ಹೊಡಿಬಡಿಯಿಂದ ಮೊದಲ ಪ್ರಸಂಗ ಮುಗಿದು 2ನೇ ಪ್ರಸಂಗವೂ ಅತ್ಯಂತ ಸುಂದರ ದೃಶ್ಯಗಳಿಂದ ಪ್ರದರ್ಶನಗೊಂಡು ಪ್ರೇಕ್ಷಕರ ಮನಸೂರೆಗೊಂಡಿತು. ಎರಡೂ ಪ್ರಸಂಗಗಳು ರಾತ್ರಿ 10-30ಕ್ಕೆ ಮುಕ್ತಾಯಗೊಂಡು ಕಲಾಭಿಮಾನಿಗಳಿಂದ ಪ್ರಶಂಸಿಸಲ್ಪಟ್ಟಿತು.

## ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠದಲ್ಲಿ ಯಕ್ಷಗಾನ ಪ್ರದರ್ಶನ



ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ನವರಾತ್ರಿಯ ಪರ್ವಕಾಲದ ಪಂಚಮಿಯಂದು ತುಮಕೂರು ಬಳಿಯ ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠದಲ್ಲಿ ಶ್ರೀ ಕಾಮಾಕ್ಷೀ ಶಾರದಾಂಬಾ ದೇವಿಯ ಸನ್ನಿಧಿಯಲ್ಲಿ 'ಶಿವಪಂಚಾಕ್ಷರಿ ಮಹಾತ್ಮೆ' ಎಂಬ ಕಥಾನಕವನ್ನು ಮಠದ ಪೀಠಾದಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಆಶೀರ್ವಾದದಿಂದ ಪ್ರದರ್ಶಿಸಿದರು.

ಹಿಮ್ಮೇಳದಲ್ಲಿ ಶ್ರೀ ಚಂದ್ರಕಾಂತ್ ರಾವ್ ಮೂಡುಬೆಳ್ಳೆ, ಯಕ್ಷಗುರು ಶ್ರೀ ದೇವದಾಸ ಕೂಡ್ಲಿ, ಶ್ರೀ ಶಿವಾನಂದ ಕೋಟ, ಕುಮಾರ ಸಂಕಲ್ಪ ವಿಶ್ವನಾಥ ಶಾನುಭೋಗ್, ಬಾಲಗೋಪಾಲ ವಿಘ್ನೇಶ ದಿವಾಕರ ರಾವ್ ಚೊಕ್ಕಾಡಿ, ಪೀಠಿಕಾ ಸ್ತ್ರೀವೇಷಧಾರಿ ಕುಮಾರಿ ಶ್ರಾವ್ಯ ರವಿಶಂಕರ, ಕಲಾವಿದರಾಗಿ ಶ್ರೀ ವ್ಯಾಸ ನಾಗರಾಜ ರಾವ್ ಎಲ್ಲೂರು, ಶ್ರೀ ಎಂ. ಆದಿತ್ಯ ಸಂತೋಷ ರಾವ್ ಚಿಟ್ಪಾಡಿ, ಶ್ರೀ ಎಂ ಸಂತೋಷ್ ರಾವ್ ಚಿಟ್ಪಾಡಿ, ಶ್ರೀ ವಾಗೀಶ್ ನಾಗರಾಜ ರಾವ್, ಎಲ್ಲೂರು, ಶ್ರೀ ಚೊಕ್ಕಾಡಿ ಕಾರ್ತಿಕ್ ದಿವಾಕರ ರಾವ್, ಶ್ರೀ ಚೊಕ್ಕಾಡಿ ಶ್ರೀಕಾಂತ ರಾವ್ ಅಲೆವೂರು, ಕುಮಾರಿ ಶ್ರೀನಿಧಿ ಶ್ರೀಕಾಂತ ರಾವ್ ಅಲೆವೂರು, ಶ್ರೀ ವಾಗೀಶ್ ಸುರೇಶ್ ರಾವ್ ನಿಟ್ಟೂರು, ಸ್ಕಂದ ವಿಶ್ವನಾಥ ಶಾನುಭೋಗ್, ಶ್ರೀ ಕೃಷ್ಣಕುಮಾರ್ ಮಟ್ಟು, ಶ್ರೀ ವ್ಯಾಸ ನಾಗರಾಜ ರಾವ್, ಎಂ. ಆದಿತ್ಯ ಸಂತೋಷ ರಾವ್, ಚಿಟ್ಪಾಡಿ, ಶ್ರೀ ವಾಗೀಶ್ ನಾಗರಾಜ ರಾವ್, ಎಲ್ಲೂರು, ಇವರು ಕಲಾವಿದರಾಗಿ ಭಾಗವಹಿಸಿದರು. ಶ್ರೀ ದಿವಾಕರ ರಾವ್ ಚೊಕ್ಕಾಡಿ ಮತ್ತು ಶ್ರೀ ಪ್ರಕಾಶ್ ರಾವ್ ಕೋಲ್ಪೆ ಇವರು ಸಹಕರಿಸಿದರು. ಮಠದ ಮೆನೇಜರ್ ಶ್ರೀ ಸತ್ಯನಾರಾಯಣ ಹಾಗೂ ಗುರುಗಳ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯರಾವ್ ಯಕ್ಷ ತಂಡದವರನ್ನು ಸ್ವಾಗತಿಸಿದರು.

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+

**With Best Compliments From :**

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org